# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಭಾನುವಾರ, ಫೆಬ್ರವರಿ 9, 2025

ಸಂಪುಟ : 51 ಸಂಚಿಕೆ : 268 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ತೃಪ್ತಿ-ಮಾನವೀಯತೆಯಿಂದ ಶಾಂತಿ-ಸೌಹಾರ್ದತೆ ಸಾಧ್ಯ

### ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ವಿಶ್ರಾಂತ ನ್ಯಾಯಾಧೀಶರಾದ ಎನ್. ಸಂತೋಷ್ ಹೆಗಡೆ ಪ್ರತಿಪಾದನೆ

ಭರಮಸಾಗರ, ಫೆ. 8- ದೇಶ ಅಭಿವೃದ್ಧಿಯಾಗಿದೆಯಾದರೂ, ಅದಕ್ಕಿಂತ ಹೆಚ್ಚಾಗಿ ದುರಾಶೆ ಎಂಬ ರೋಗದ ಅಭಿವೃದ್ಧಿಯಾಗಿದೆ. 'ತೃಪ್ತಿ-ಮಾನವೀಯತೆ' ಮೌಲ್ಯಗಳನ್ನು ಮೈಗೂಡಿಸಿಕೊಂಡಾಗ ಸಮಾಜದಲ್ಲಿ ಶಾಂತಿ-ಸೌಹಾರ್ದತೆ ಜಾಸ್ತಿಯಾಗಲು ಸಾಧ್ಯವಿದೆ ಎಂದು ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ಎನ್. ಸಂತೋಷ್ ಹೆಗಡೆ ಹೇಳಿದರು.




ಇಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ 5ನೇ ದಿನದ ಕಾರ್ಯಕ್ರಮದಲ್ಲಿ 'ನ್ಯಾಯಾಲಯ ಮತ್ತು ಸಮಾಜ' ವಿಷಯ ಕುರಿತು ಅವರು ಮಾತನಾಡಿದರು.

ದುರಾಶೆಗೆ ಮದ್ದು ತೃಪ್ತಿ ಎಂಬ ಗುಣ. ಇದು ಹಿರಿಯರು ಕಟ್ಟಿಕೊಟ್ಟ ಮಹತ್ವದ ಮೌಲ್ಯ. ಮಕ್ಕಳಲ್ಲಿ ತೃಪ್ತಿ ಮತ್ತು ಮಾನವೀಯತೆಯ ಮೌಲ್ಯಗಳನ್ನು ಬಿತ್ತಬೇಕಾಗಿದೆ ಎಂದರು.

ಶ್ರೀಮಂತಿಕೆ ಮತ್ತು ಅಧಿಕಾರ ಪೂಜಿಸುವ ಸಮಾಜದಲ್ಲಿ ನಾವಿದ್ದೇವೆ. ಪ್ರಾಮಾಣಿಕತೆಗೆ ಬೆಲೆ ಇಲ್ಲವಾಗಿದೆ. ಸಮಾಜದ ಭಾವನೆಗಳು ಬದಲಾಗಬೇಕಾದ ಅಗತ್ಯತೆ ಇದೆ. ಇಲ್ಲವಾದಲ್ಲಿ ರಣರಂಗದಲ್ಲಿ ವಾದ ಮಾಡಬೇಕಾದ ಪರಿಸ್ಥಿತಿ ಬರಬಹುದು ಎಂದು ಹೇಳಿದರು.

ದೇಶದಲ್ಲಿ ಅನೇಕ ಹಗರಣಗಳು ನಡೆದಿವೆ. ದೇಶ ಕಾಯುವ ಯೋಧರಿಗಾಗಿ ಖರೀದಿಸಿದ 'ಜೀಪ್' ಹಗರಣದಲ್ಲಿ 52 ಲಕ್ಷ ರೂ.ಗಳನ್ನು ಲೂಟಿ ಮಾಡಲಾಗಿದೆ. ಅದರಂತೆ ಬೋಫೋರ್ಸ್ ಹಗರಣದಲ್ಲಿ 64 ಕೋಟಿ ರೂ., ಕಾಮನ್‌ವೆಲ್ತ್ ಹಗರಣದಲ್ಲಿ 70 ಸಾವಿರ ಕೋಟಿ ರೂ., 2 ಜಿ ಹಗರಣದಲ್ಲಿ 1 ಲಕ್ಷದ 76 ಸಾವಿರ ಕೋಟಿ ರೂ., ಕೋಲ್ಗೇಟ್ ಹಗರಣದಲ್ಲಿ 1 ಲಕ್ಷದ 86 ಸಾವಿರ ಕೋಟಿ ರೂಗಳನ್ನು ಲೂಟಿ ಮಾಡಲಾಗಿದೆ ಎಂದು ಅಂಕಿ-ಅಂಶಗಳೊಂದಿಗೆ ತಿಳಿಸಿದರು.

ಸಮಾಜದಲ್ಲಿ ಆಟಂಬಾಂಬ್ ಹೇಗೆ ತಯಾರಿಸಬೇಕೆಂಬುದನ್ನು ಕಲಿಸಲಾಗುತ್ತದೆ. ಆದರೆ ಅದನ್ನು ಹೇಗೆ ಬಳಸಬೇಕೆಂದು ಹೇಳಿಕೊಡುವುದಿಲ್ಲ. ಸಮಾಜದಲ್ಲಿ (2ನೇ ಪುಟಕ್ಕೆ)

## ವಾಲ್ಮೀಕಿ ಚರಿತ್ರೆಯನ್ನು ಅರ್ಥೈಸಿಕೊಂಡಲ್ಲಿ ಜೀವನ ಸಾರ್ಥಕ

### ರಾಜನಹಳ್ಳಿ ಪೀಠದಲ್ಲಿನ ಮಹರ್ಷಿ ವಾಲ್ಮೀಕಿ ಜಾತ್ರೆಯಲ್ಲಿ ಲೋಕಸಭಾ ಸದಸ್ಯೆ ಡಾ.ಪ್ರಭಾ ಮಲ್ಲಿಕಾರ್ಜುನ್



ಮಲೇಬೆನ್ನೂರು, ಫೆ.8- ರಾಮಾಯಣವನ್ನು ಬರೆದ ಆದಿಕವಿ ಮಹರ್ಷಿ ವಾಲ್ಮೀಕಿ ಅವರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರು ಅರ್ಥೈಸಿಕೊಂಡಲ್ಲಿ ಜೀವನ ಸಾರ್ಥಕವಾಗುತ್ತದೆ ಎಂದು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ಹಮ್ಮಿಕೊಂಡಿದ್ದ 7ನೇ ವರ್ಷದ ವಾಲ್ಮೀಕಿ ಜಾತ್ರೆಯಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜೀವನಾಧಾರಿತ ಫಲಪುಷ್ಪ ಪ್ರದರ್ಶನ ಮೇಳ ಉದ್ಘಾಟಿಸಿ, ನಂತರ ನಡೆದ ಮಹಿಳಾ ಗೋಷ್ಠಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಾಲ್ಮೀಕಿ ಮಹರ್ಷಿಗಳು ಕೇವಲ ಒಂದು ಸಮಾಜದ ಏಳಿಗೆಗಾಗಿ ಬದುಕಿದವರಲ್ಲ, ಸಮಸ್ತ ಜನತೆಯ, ಮನುಕುಲದ ಏಳಿಗೆಗಾಗಿ ಶ್ರಮಿಸಿದ ಮಹಾನ್ ತಪಸ್ವಿಗಳಾಗಿದ್ದವರು. ರಾಮಾಯಣದಲ್ಲಿ ನಾಡಿನ ಕಲೆ, ಸಾಹಿತ್ಯ, ಸಾಂಸ್ಕೃತಿಕ (3ನೇ ಪುಟಕ್ಕೆ)

## ದೆಹಲಿಯಲ್ಲಿ ಕೇಸರಿ ದರ್ಬಾರ್

### 26 ವರ್ಷಗಳ ನಂತರ ದೆಹಲಿ ವಿಧಾನಸಭೆ ಬಿಜೆಪಿ ಮಡಿಲಿಗೆ

### ಕೇಜ್ರೀವಾಲ್‌ಗೂ ಸೋಲಿನ ಕಹಿ, ಮತ್ತೆ ಸೊನ್ನೆ ಸುತ್ತಿದ ಕಾಂಗ್ರೆಸ್

ನವದೆಹಲಿ, ಫೆ. 8 - ದೆಹಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 26 ವರ್ಷಗಳ ನಂತರ ಮೂರನೇ ಎರಡರಷ್ಟು ಭರ್ಜರಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿದೆ. ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಾರ್ಟಿಯು ಕೇಸರಿ ಅಲೆಗೆ ಸಿಲುಕಿ ಅಧಿಕಾರದಿಂದ ಪತನಗೊಂಡಿದೆ.



ದೆಹಲಿಯಲ್ಲಿ 10 ವರ್ಷಗಳ ಕಾಲ ಆಡಳಿತ ನಡೆಸಿದ್ದ ಆಮ್ ಆದ್ಮಿ ಪಾರ್ಟಿ ಆಘಾತಕಾರಿ ಸೋಲು ಕಂಡಿದ್ದು ಪಕ್ಷದ ನಾಯಕ ಅರವಿಂದ ಕೇಜ್ರಿವಾಲ್, ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯ, ಸೋಮನಾಥ ಭಾರತಿ ಹಾಗೂ ಸೌರಭ ಭಾರದ್ವಾಜ್ ಸೇರಿದಂತೆ ಹಲವರು ಸೋಲು ಕಂಡಿದ್ದಾರೆ. ಮುಖ್ಯಮಂತ್ರಿ ಆತಿಶಿ ಮಾತ್ರ ಕಾಲ್ಕಾಜಿ ಕ್ಷೇತ್ರದಲ್ಲಿ ಗೆಲುವು ಕಂಡಿದ್ದಾರೆ.

70 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 48ರಲ್ಲಿ ಜಯ ಸಾಧಿಸಿದೆ. ಆಮ್ ಆದ್ಮಿ ಪಾರ್ಟಿ 22 ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ. ಈ ಚುನಾವಣೆಯಲ್ಲಿ ಬಿಜೆಪಿ ಹಾಗೂ ಆಮ್ ಆದ್ಮಿ ಪಾರ್ಟಿ ನೇರ ಪ್ರತಿಸ್ಪರ್ಧಿಗಳಾಗಿದ್ದವು. ಕಳೆದ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿ 62 ಸದಸ್ಯರನ್ನು ಹೊಂದಿದ್ದರೆ, ಬಿಜೆಪಿ ಕೇವಲ ಎಂಟು ಶಾಸಕರನ್ನು ಹೊಂದಿತ್ತು.

1998ರಲ್ಲಿ ಶೀಲಾ ದೀಕ್ಷಿತ್ ನೇತೃತ್ವದಲ್ಲಿ ಸತತ 15 ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್, ಒಂದು ಸ್ಥಾನ ಸಹ ಗಳಿಸಲು ಸಹ ಸಾಧ್ಯವಾಗದೆ ಮುಖಭಂಗಕ್ಕೀಡಾಗಿದೆ. ಕಳೆದ ಮೂರು ಚುನಾವಣೆಗಳಲ್ಲೂ ಕಾಂಗ್ರೆಸ್ ಶೂನ್ಯ ಸಾಧನೆ ಮಾಡಿದೆ. ಬಹುತೇಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ.

26 ವರ್ಷಗಳ ನಂತರ ದೆಹಲಿ ಗದ್ದುಗೆ ಹಿಡಿಯುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆ ಕಂಡಿದ್ದ ಬಿಜೆಪಿ, ನಂತರದಲ್ಲಿ ತನ್ನ ಸಾಮರ್ಥ್ಯ ಗಣನೀಯವಾಗಿ (2ನೇ ಪುಟಕ್ಕೆ)

### ಆಮ್ ಆದ್ಮಿ ಮತ ಶೇ.10 ಕುಸಿತ

ನವದೆಹಲಿ, ಫೆ 8 - ದೆಹಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿ ಕಳೆದ ಬಾರಿಗೆ ಹೋಲಿಸಿದರೆ ಶೇ. 10ರಷ್ಟು ಕಡಿಮೆ ಮತ ಪಡೆದಿದೆ. ಬಿಜೆಪಿ ಶೇಕಡ 7ರಷ್ಟು ಹೆಚ್ಚು ಮತ ಗಳಿಸುವ ಮೂಲಕ ಭರ್ಜರಿ ಜಯ ಸಾಧಿಸಿದೆ.

2020ರಲ್ಲಿ ಆಮ್ ಆದ್ಮಿ ಪಾರ್ಟಿ ಶೇಕಡ 53.57ರಷ್ಟು ಮತ ಪಡೆದಿತ್ತು ಈ ಬಾರಿ ಪಕ್ಷ ಗಳಿಸಿದ ಮತಗಳ ಪ್ರಮಾಣ ಶೇಕಡ 43.57 ಕ್ಕೆ ಕುಸಿದಿದೆ. 2020ರಲ್ಲಿ 62 ಸ್ಥಾನ ಪಡೆದಿದ್ದ ಆಮ್ ಆದ್ಮಿ ಪಾರ್ಟಿ ಈ ಬಾರಿ ಕೇವಲ 22 ಸ್ಥಾನಗಳಿಗೆ ಸೀಮಿತವಾಗಿದೆ.

ಕಳೆದ ಚುನಾವಣೆಯಲ್ಲಿ ಶೇಕಡ 38.51ರಷ್ಟು ಮತ ಪಡೆದಿದ್ದ ಬಿಜೆಪಿ ಈ ಬಾರಿ ಶೇಕಡ 45.56ರಷ್ಟು ಮತ ಗಳಿಸಿದೆ. ಕಳೆದ ಬಾರಿ ಪಕ್ಷ ಕೇವಲ ಎಂಟು ಸ್ಥಾನ ಹೊಂದಿದ್ದರೆ, ಈ ಬಾರಿ 48 ಸ್ಥಾನ ಗಳಿಸಿದೆ.

2013ರ ನಂತರ ಕಾಂಗ್ರೆಸ್ ಪಕ್ಷ ಯಾವುದೇ ಸ್ಥಾನ ಪಡೆಯಲು ಸಾಧ್ಯವಾಗಿಲ್ಲ. ಈ ಬಾರಿ ಪಕ್ಷ ಶೇಕಡ 6.34 ರಷ್ಟು ಮತ ಗಳಿಸಿದೆ. ಇದು ಕಳೆದ ಬಾರಿಗಿಂತ ಶೇಕಡ 2.1 ರಷ್ಟು ಹೆಚ್ಚಾಗಿದೆ.








# ರಾಜನಹಳ್ಳಿ ವಾಲ್ಮೀಕಿ ಮಠದಲ್ಲಿ ಅರಿವಿನ ಜಾತ್ರೆಗೆ ವಿಧ್ಯುಕ್ತ ಚಾಲನೆ

## ಗಮನ ಸೆಳೆದ ವಸ್ತು ಪ್ರದರ್ಶನ, ಉದ್ಯೋಗ ಮೇಳ, ಫಲಪುಷ್ಪ ಪ್ರದರ್ಶನ, ವಿಚಾರಗೋಷ್ಠಿ, ನೃತ್ಯ ನಾಟಕ ಪ್ರದರ್ಶನ

ಮಲೇಬೆನ್ನೂರು, ಫೆ.8- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಶನಿವಾರ ಬೆಳಿಗ್ಗೆ ಶಾಸಕ ಬಿ. ಪಿ.ಹರೀಶ್ ಅವರು ಶ್ರೀ ಡಾ. ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಧ್ವಜಾರೋಹಣ ಮಾಡುವ ಮೂಲಕ 7ನೇ ವರ್ಷದ ಐತಿಹಾಸಿಕ ವಾಲ್ಮೀಕಿ ಅರಿವಿನ ಜಾತ್ರೆಗೆ ವಿಧ್ಯುಕ್ತ ಚಾಲನೆ ನೀಡಿದರು.

ಇದಕ್ಕೂ ಮುನ್ನ ಶ್ರೀಗಳು ಹಾಗೂ ಶಾಸಕರು, ಲಿಂಗೈಕ್ಯ ಜಗದ್ಗುರು ಶ್ರೀ ಪುಣ್ಯಾನಂದ ಪುರಿ ಶ್ರೀಗಳವರ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದರು. ಶಾಸಕ ಬಿ.ಪಿ. ಹರೀಶ್ ಮಾತನಾಡಿದರು.

ಧ್ವಜಾರೋಹಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಕುಂಚಿಟಿಗ ಗುರುಪೀಠದ ಶ್ರೀ ಶಾಂತವೀರ ಸ್ವಾಮೀಜಿ ಆಶೀರ್ವಚನ ನೀಡಿ, ರಾಜಕಾರಣಿಗಳು ಅಧಿಕಾರಕ್ಕಾಗಿ ಪಾದಯಾತ್ರೆ ಮಾಡುತ್ತಾರೆ.

ಆದರೆ, ವಾಲ್ಮೀಕಿ ಶ್ರೀಗಳು, ಸಮಾಜಕ್ಕಾಗಿ 350 ಕಿ.ಮೀ ಪಾದಯಾತ್ರೆ ಮಾಡಿ, 257 ದಿನ ಧರಣಿ ಸತ್ಯಾಗ್ರಹ ನಡೆಸಿ, ಸಮಾಜಕ್ಕೆ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಗಳೂರು ಕ್ಷೇತ್ರದ ಶಾಸಕರೂ, ವಾಲ್ಮೀಕಿ ಜಾತ್ರೆ ಸಮಿತಿ ಅಧ್ಯಕ್ಷರೂ ಆದ ಎಂ.ದೇವೇಂದ್ರಪ್ಪ ಮಾತನಾಡಿ, ವಾಲ್ಮೀಕಿ ಜಾತ್ರೆ ಆಚರಣೆ ಸಮಾಜ ದಲ್ಲಿ ಬದಲಾವಣೆಯ ಪರ್ವ ಆರಂಭವಾಗಿದ್ದು, ಸಮಾಜಕ್ಕೆ ದಿಕ್ಸೂಚಿಯಾಗಿದೆ ಎಂದು ಶ್ರೀಗಳನ್ನು ಅಭಿನಂದಿಸಿದರು.

ಜಾತ್ರಾ ಸಮಿತಿ ಸಂಚಾಲಕ ಶ್ರೀನಿವಾಸ್ ದಾಸಕರಿಯಪ್ಪ, ಮಠದ ಧರ್ಮದರ್ಶಿಗಳಾದ ಹೊಸಪೇಟೆ ಜಂಬಯ್ಯ ನಾಯಕ, ಕೆ.ಬಿ. ಮಂಜುನಾಥ್, ಹರಿಹರ ನಗರಸಭೆ ಅಧ್ಯಕ್ಷೆ ಶ್ರೀಮತಿ ಕವಿತಾ ಮಾರುತಿ ಬೇಡರ್, ಮಲೇಬೆನ್ನೂರು ಪುರಸಭೆ ಹನುಮಂತಪ್ಪ, ರಾಜನಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಹೇಮಾವತಿ ಪರಶುರಾಮಪ್ಪ, ಉಪಾಧ್ಯಕ್ಷ ಎ.ಕೆ. ನಾಗೇಂದ್ರಪ್ಪ, ಹರಿಹರ ತಾ. ಗ್ರಾ. ನಾಯಕ ಸಮಾಜದ ಅಧ್ಯಕ್ಷ ಜಿಗಳಿ ರಂಗಪ್ಪ, ಹರಿಹರ ತಾ. ಗ್ರಾ. ಜಾತ್ರಾ ಸಮಿತಿ ಅಧ್ಯಕ್ಷ ಕೆ.ಬೇವಿನಹಳ್ಳಿ ಹಾಲೇಶ್, ಹರಿಹರ ನಗರ ಅಧ್ಯಕ್ಷೆ ಪಾರ್ವತಿ ಬೋರಯ್ಯ, ವಿಜಯಶ್ರೀ ಮಹೇಂದ್ರಕುಮಾರ್, ಗೌರಮ್ಮ ಮಂಜುನಾಥ್, ನಿವೃತ್ತ ಶಿಕ್ಷಕ ಜಿ.ಆರ್.ನಾಗರಾಜ್, ರಾಜನಹಳ್ಳಿ ಭೀಮಣ್ಣ, ಪತ್ರಕರ್ತ ಪ್ರಕಾಶ್, ಎಂ.ಎನ್.ಕೋಟೆ ಕುಮಾರ್, ನಿವೃತ್ತ ಯೋಧ ಅಂಚಲಪ್ಪ ತಳವಾರ ಮತ್ತು ಇತರರು ಈ ವೇಳೆ ಹಾಜರಿದ್ದರು.

**ಮೆರವಣಿಗೆ :** ಧ್ವಜಾರೋಹಣ ಕಾರ್ಯಕ್ರಮದ ನಂತರ ರಾಜನಹಳ್ಳಿ ಗ್ರಾಮದಿಂದ ಶ್ರೀಮಠದವರೆಗೆ ಶ್ರೀ ವಾಲ್ಮೀಕಿ ಪ್ರತಿಮೆಯ ಭವ್ಯ ಮೆರವಣಿಗೆ ಸಂಭ್ರಮದಿಂದ ಜರುಗಿತು.

**ಮೇಳ ಉದ್ಘಾಟನೆ :** ಜಾತ್ರೆಯಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಹಮ್ಮಿಕೊಂಡಿರುವ ವಸ್ತು ಪ್ರದರ್ಶನವನ್ನು ಶ್ರೀಗಳ ಸಾನ್ನಿಧ್ಯದಲ್ಲಿ ಮಾಜಿ ಶಾಸಕ ಎಸ್.ರಾಮಪ್ಪ ಉದ್ಘಾಟಿಸಿದರು. ಸಂತೋಷ್ ಲಾಡ್ ಫೌಂಡೇಷನ್ ವತಿಯಿಂದ ಏರ್ಪಡಿಸಿರುವ ಉದ್ಯೋಗ ಮೇಳಕ್ಕೆ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಚಾಲನೆ ನೀಡಿದರು.

# ನಗರದಲ್ಲಿ ಇಂದು ಜಿಲ್ಲಾ ಮಟ್ಟದ ಮಂದಿರ ಅಧಿವೇಶನ

ದಾವಣಗೆರೆ, ಫೆ.8- ಸನಾತನ ಹಿಂದೂ ಧರ್ಮದ ರಕ್ಷಣೆ ಹಾಗೂ ದೇವಸ್ಥಾನಗಳಲ್ಲಿ ಧರ್ಮ ಶಿಕ್ಷಣ ನೀಡುವ ಉದ್ದೇಶದಿಂದ ಕರ್ನಾಟಕ ದೇವಸ್ಥಾನ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘ ಮತ್ತು ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಜಿಲ್ಲಾ ಮಟ್ಟದ ಮಂದಿರ ಅಧಿವೇಶನ ಕಾರ್ಯಕ್ರಮವನ್ನು ನಾಳೆ ದಿನಾಂಕ 9ರ ಭಾನುವಾರ ಹಮ್ಮಿಕೊಳ್ಳ ಲಾಗಿದೆ. ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಸಮು ದಾಯ ಭವನದಲ್ಲಿ ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ನಡೆಯಲಿದೆ ಎಂದು ಸಮಿತಿಯ ಸಮನ್ವಯಕಾರರಾದ ಗುರುಪ್ರಸಾದ್ ಗೌಡ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಈ ಅಧಿವೇಶನದಲ್ಲಿ ಜಿಲ್ಲೆಯಲ್ಲಿರುವ ಸುಮಾರು 400 ಕ್ಕೂ ಅಧಿಕ ದೇವಸ್ಥಾನಗಳ ಪುರೋಹಿತರು, ಧರ್ಮದರ್ಶಿಗಳು ಆಗಮಿಸಲಿ ದ್ದಾರೆ. ಹೆಬ್ಬಾಳು ಶ್ರೀ ರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಹಾಸಂಘದ ಸೋಮಶೇಖರ, ವಿಜಯ ರೇವಣಕರ್, ನಾಗೇಂದ್ರ ಪ್ರಕಾಶ್, ಸುರೇಶ್, ಎನ್. ಮಲ್ಲೇಶ್, ಮುತ್ತುವೀರ್ ಸೇರಿದಂತೆ ಮತ್ತಿತರರಿದ್ದರು.

## ಎಎಪಿ, ಕಾಂಗ್ರೆಸ್ ಕೈಜೋಡಿಸಿದ್ದರೆ ದೆಹಲಿಯಲ್ಲಿ ಬಿಜೆಪಿ ಗೆಲ್ಲುತ್ತಿರಲಿಲ್ಲ : ಶಿವಸೇನೆ (ಯು.ಬಿ.ಟಿ.)

ಮುಂಬೈ, ಫೆ. 8 - ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಹಾಗೂ ಕಾಂಗ್ರೆಸ್ ಕೈಜೋಡಿಸಿದ್ದಿದ್ದರೆ ಬಿಜೆಪಿ ಗೆಲ್ಲುತ್ತಿರಲಿಲ್ಲ ಎಂದು ಶಿವಸೇನೆ (ಯು.ಬಿ.ಟಿ.) ನಾಯಕ ಸಂಜಯ್ ರಾವತ್ ಹೇಳಿದ್ದಾರೆ.

ಎಎಪಿ ಹಾಗೂ ಕಾಂಗ್ರೆಸ್ ಕೈಜೋಡಿಸಿದ್ದಿದ್ದರೆ ಒಳ್ಳೆಯದಿತ್ತು. ಆದರೆ ಎರಡೂ ಪಕ್ಷಗಳು ಬಿಜೆಪಿ ವಿರುದ್ಧ ಪ್ರತ್ಯೇಕವಾಗಿ ಹೋರಾಟ ನಡೆಸಿದವು. ಅವು ಜೊತೆಯಾಗಿ ಸ್ಪರ್ಧಿಸಿದಿದ್ದರೆ ಬಿಜೆಪಿ ಸೋಲು ನಿಶ್ಚಿತವಾಗಿರುತ್ತಿತ್ತು. ಇದರಿಂದ ನಾವು ಪಾಠ ಕಲಿಯಬೇಕೆಂದು ರಾವತ್ ಹೇಳಿದ್ದಾರೆ.

# ದೆಹಲಿಯಲ್ಲಿ ಕೇಸರಿ ದರ್ಬಾರ್

(1ನೇ ಪುಟದಿಂದ) ಹೆಚ್ಚಿಸಿಕೊಂಡಿದೆ.

ಈ ಗೆಲುವು ಐತಿಹಾಸಿಕ ಎಂದು ಬಣ್ಣಿಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ದೆಹಲಿಯ ಜನತೆ 'ಆಪ್ದಾಗೆ' ಹೊರಹೋಗುವ ಬಾಗಿಲು ತೋರಿಸಿದ್ದಾರೆ. ಈಗ ಡಬಲ್ ಇಂಜಿನ್ ಸರ್ಕಾರ ಡಬಲ್ ವೇಗದಲ್ಲಿ ಅಭಿವೃದ್ಧಿ ಕಾಣಲಿದೆ ಎಂದಿದ್ದಾರೆ.

ಚುನಾವಣಾ ಪ್ರಚಾರದ ಸಂದರ್ಭ ದಲ್ಲಿ ಮೋದಿ ಆಮ್ ಆದ್ಮಿ ಪಾರ್ಟಿಯನ್ನು ಆಪ್ದ ಎಂದು ಲೇವಡಿ ಮಾಡಿದ್ದರು. ಆಪ್ದ ಎಂದರೆ ಹಿಂದಿಯಲ್ಲಿ ವಿನಾಶ ಎಂಬ ಅರ್ಥ ಬರುತ್ತದೆ. ಆಮ್ ಆದ್ಮಿ ಪಾರ್ಟಿಯ ಕಳೆದ ಹತ್ತು ವರ್ಷಗಳ ಆಡಳಿತವನ್ನು ಮೋದಿ ಈ ರೀತಿ ಟೀಕಿಸಿದ್ದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ದೆಹಲಿಯ ಎಲ್ಲಾ ಏಳು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಆದರೆ ವಿಧಾನಸಭಾ ಚುನಾವಣೆಯಲ್ಲಿ ಪರಿಸ್ಥಿತಿ ಭಿನ್ನವಾಗಿತ್ತು.

ನೀರು, ಚರಂಡಿ, ಕಸ ಸೇರಿದಂತೆ ಸ್ಥಳೀಯ ವಿಷಯಗಳು ಪ್ರಾಮುಖ್ಯತೆ ಪಡೆದುಕೊಂಡಿದ್ದವು. ರಾಜಕೀಯ ಪಕ್ಷಗಳು ದೆಹಲಿಯ ಜನರ ಜೀವನ ಮಟ್ಟ ಸುಧಾರಿಸಲು ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದವು.

ಅರವಿಂದ ಕೇಜ್ರಿವಾಲ್ ಅವರು ಅಬಕಾರಿ ನೀತಿ ವಿಷಯದಲ್ಲಿ ಭ್ರಷ್ಟಾಚಾರ ನಡೆಸಿದ್ದಾರೆ ಹಾಗೂ ಭವ್ಯ ಮುಖ್ಯಮಂತ್ರಿ ನಿವಾಸ ನಿರ್ಮಿಸಿಕೊಂಡಿದ್ದಾರೆ ಎಂಬುದನ್ನು ಬಿಜೆಪಿ ಪ್ರಮುಖವಾಗಿ ಪ್ರಸ್ತಾಪಿಸಿತ್ತು.

ಆಮ್ ಆದ್ಮಿ ಪಾರ್ಟಿ ಹಲವು ಕೊಡುಗೆಗಳನ್ನು ನೀಡುವುದಾಗಿ ಹೇಳಿದ್ದರೆ, ಬಿಜೆಪಿಯೂ ಮೋದಿ ಗ್ಯಾರಂಟಿಗಳ ಹೆಸರಿನಲ್ಲಿ ಜನರಿಗೆ ಹಲವಾರು ಭರವಸೆ ನೀಡಿತ್ತು.

ಚುನಾವಣಾ ಸೋಲಿನ ನಂತರ ಮಾತನಾಡಿರುವ ಕೇಜ್ರಿವಾಲ್, ನಾವು ಒಳ್ಳೆಯ ಚುನಾವಣಾ ಹೋರಾಟ ನಡೆಸಿ ದ್ದೇವೆ. ಪ್ರತಿಪಕ್ಷವಾಗಿ ರಚನಾತ್ಮಕವಾಗಿ ಪಾತ್ರ ನಿರ್ವಹಿಸುತ್ತೇವೆ. ದೆಹಲಿಯ ಜನ ರಿಗೆ ಲಭ್ಯವಾಗಿರುತ್ತೇವೆ ಎಂದಿದ್ದಾರೆ. ಕೇಜ್ರಿ ವಾಲ್ ಜೈಲಿಗೆ ತೆರಳಿದ ನಂತರ ಮುಖ್ಯ ಮಂತ್ರಿ ಸ್ಥಾನಕ್ಕೆ ಬಂದಿದ್ದ ಆತಿಶಿ ಅವರು ಬಿಜೆಪಿಯ ರಮೇಶ್ ಬಿಧುರಿ ವಿರುದ್ಧ 3,521 ಮತಗಳ ಜಯ ಗಳಿಸಿದ್ದಾರೆ.

2020ರಲ್ಲಿ 62 ಸ್ಥಾನ ಗಳಿಸಿದ್ದ ಆಮ್ ಆದ್ಮಿ ಪಾರ್ಟಿ ಈ ಬಾರಿ ಆಘಾತಕಾರಿ ಸೋಲು ಕಂಡಿದೆ. ಕಾಂಗ್ರೆಸ್ ಸತತ ಮೂರನೇ ಬಾರಿ ಖಾತೆ ತೆರೆಯಲು ಸಾಧ್ಯ ವಾಗದೆ ಭಾರೀ ಮುಖಭಂಗಕ್ಕೀಡಾಗಿದೆ.

1993 ರಿಂದ 1998ರ ನಡುವೆ ದೆಹಲಿಯಲ್ಲಿ ಆಡಳಿತ ನಡೆಸಿದ್ದ ಬಿಜೆಪಿ, ನಂತರ ಸುದೀರ್ಘ 26 ವರ್ಷಗಳ ಕಾಲ ಅಧಿಕಾರದಿಂದ ಹೊರಗಿತ್ತು.. ಲೋಕಸಭಾ ಚುನಾವಣೆಗಳಲ್ಲಿ ಮೇಲುಗೈ ಸಾಧಿಸಿದ್ದರೂ ಸಹ ವಿಧಾನಸಭಾ ಚುನಾವಣೆಗಳಲ್ಲಿ ಹಿನ್ನಡೆ ಕಾಣುತ್ತಾ ಬಂದಿತ್ತು. ಆದರೆ, ವಿಧಾನಸಭಾ ಚುನಾವಣೆಯಲ್ಲಿ ಗಳಿಸುವ ಮತಗಳ ಪ್ರಮಾಣ ನಿರಂತರವಾಗಿ ಏರಿಕೆ ಯಾಗಿತ್ತು. 2015ರಲ್ಲಿ ಶೇಕಡ 32, 2020 ರಲ್ಲಿ ಶೇಕಡ 38.5 ಹಾಗೂ ಈ ಬಾರಿ ಶೇಕಡ 45.56 ಮತಗಳನ್ನು ಪಡೆದಿದೆ.



# ನಗರದಲ್ಲಿ ಇದು ದತ್ತಿ ಕಾರ್ಯಕ್ರಮ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದಿಂದ ಇಂದು ಬೆಳಿಗ್ಗೆ 11.30ಕ್ಕೆ ಶ್ರೀ ಗುರುಬಸವ ಮಂಟಪದಲ್ಲಿ ದತ್ತಿ ಕಾರ್ಯಕ್ರಮ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಲಿಂ. ಸಿ.ಎಂ. ರೇವಪ್ಪ ಮತ್ತು ಲಿಂ.ಪಿ.ಹೆಚ್. ಪಾರ್ವತಮ್ಮ ದತ್ತಿ (ದಾಸೋಹಿಗಳು - ಸಿ.ಆರ್. ಪುಷ್ಪಾವತಿ ಬುಳ್ಳಾಪುರದ ಮಲ್ಲಿಕಾರ್ಜುನ ಸ್ವಾಮಿ ಮತ್ತು ಸಹೋದರರು, ಸಹೋದರಿಯರು) ಕಾರ್ಯಕ್ರಮದ ಸಾನ್ನಿಧ್ಯವನ್ನು ಕಮ್ಮತ್ತಹಳ್ಳಿ-ಪಾಂಡೋಮಟ್ಟಿ ವಿರಕ್ತಮಠದ ಶ್ರೀ ಗುರುಬಸವ ಮಹಾಸ್ವಾಮೀಜಿ ವಹಿಸಲಿದ್ದು, ಅಕ್ಷತೆಯನ್ನು ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ವಹಿಸಲಿದ್ದಾರೆ. ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ವಿಷಯ ಕುರಿತು ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಅನುಭಾವ ನೀಡಲಿದ್ದಾರೆ.


## ಭಾವಪೂರ್ಣ ಶ್ರದ್ಧಾಂಜಲಿ



ಮಹಿಳಾ ಸಂಘಟನೆಗಳ ಸಕ್ರಿಯ ಪದಾಧಿಕಾರಿ ಆಗಿದ್ದ

**ಶ್ರೀಮತಿ ಉಮಾ ವೀರಭದ್ರಪ್ಪ**


ಇವರು ದಿನಾಂಕ 07.02.2025ರ ಶುಕ್ರವಾರ ನಿಧನರಾಗಿದ್ದು, ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಕಾರ್ಯದರ್ಶಿ, ಪದಾಧಿಕಾರಿಗಳು

ಶ್ರೀ ಅಕ್ಕಮಹಾದೇವಿ ಸಮಾಜ, ಮಹಿಳಾ ಸೇವಾ ಸಮಾಜ, ವಧೂ-ವರರ ಅನ್ವೇಷಣಾ ಕೇಂದ್ರ, ದಾವಣಗೆರೆ.



## ಪ್ರಥಮ ವರ್ಷಾಂತಿಕ ಕಾರ್ಯಕ್ರಮ



**ಲಿಂ॥ ಶ್ರೀ ಜೋಗಪ್ಪನವರ ಕೊಟ್ರಬಸಪ್ಪನವರು**

ನಗರಸಭೆ ಮಾಜಿ ಸದಸ್ಯರು, ಧರ್ಮದರ್ಶಿಗಳು,
ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನ
ನಿಧನ : 24.02.2024

ಇವರ ಪ್ರಥಮ ವರ್ಷಾಂತಿಕ ಕಾರ್ಯಕ್ರಮವನ್ನು ದಿನಾಂಕ 09-01-2025ರ ಭಾನುವಾರ ಬೆಳಿಗ್ಗೆ 10.30 ಕ್ಕೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು, ಶ್ರೀಯುತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಪುತ್ರರು : ಶ್ರೀಮತಿ ಶೋಭಾ ಮತ್ತು ಜೆ.ಕೆ. ಕರಿಬಸಪ್ಪ ಮತ್ತು ಮಕ್ಕಳು
ಶ್ರೀಮತಿ ಲಕ್ಕಮ್ಮ ಜೆ.ಕೆ. ಕೊಟ್ರಬಸಪ್ಪ ಮತ್ತು ಮಕ್ಕಳು
ಶ್ರೀಮತಿ ಕೆಂಚಮ್ಮ ಮತ್ತು ಜೆ.ಕೆ. ವೀರಣ್ಣ ಮತ್ತು ಮಕ್ಕಳು
ಶ್ರೀಮತಿ ಸುನಂದ ಮತ್ತು ಜೆ.ಕೆ. ಚಂದ್ರಶೇಖರ್ ಮತ್ತು ಮಕ್ಕಳು
ಶ್ರೀಮತಿ ಚಂದ್ರಕಲಾ ಮತ್ತು ಜೆ.ಕೆ. ಶಿವಾನಂದ ಮತ್ತು ಮಕ್ಕಳು
ಪುತ್ರಿ : ಶ್ರೀಮತಿ ಹೊನ್ನಮ್ಮ ಮತ್ತು ಟಿ.ಗಂಗಾಧರಪ್ಪ
ಮತ್ತು ಮರಿಮೊಮ್ಮಕ್ಕಳು ಹಾಗೂ ಜೋಗಪ್ಪರ ವಂಶಸ್ಥರು

ಶ್ರೀ ಬೀರಲಿಂಗೇಶ್ವರ ಅಂಡ್ ಕೋ., ಎಪಿಎಂಸಿ ಎ ಬ್ಲಾಕ್, ದಾವಣಗೆರೆ.
ವಿಶ್ವಾಸ್ ಸ್ಟೀಲ್ಸ್ & ಸಿಮೆಂಟ್ಸ್
ರಾಜ್‌ಭವನ್ ಗಾರ್ಡನ್ ಬಾರ್ & ರೆಸ್ಟೋರೆಂಟ್
ಪಿ.ಬಿ. ರೋಡ್, ದಾವಣಗೆರೆ.


# ಮೊದಲ ಮದುವೆ ಮುಂದುವರೆದಿದ್ದರೂ ಎರಡನೇ ಗಂಡನಿಂದ ಜೀವನಾಂಶ

**ಸುಪ್ರೀಂ ಕೋರ್ಟ್**

ನವದೆಹಲಿ, ಫೆ. 8 - ಮೊದಲ ಮದುವೆ ಕಾನೂ ನಾತ್ಮಕವಾಗಿ ಮುಂದುವರೆದಿದ್ದರೂ ಎರಡನೇ ಗಂಡ ನಿಂದ ಜೀವನಾಂಶ ಪಡೆಯಲು ಮಹಿಳೆಗೆ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಸತೀಶ್ ಚಂದ್ರ ಶರ್ಮ ಅವರನ್ನು ಒಳಗೊಂಡ ಪೀಠ ಈ ತೀರ್ಪು ನೀಡಿದೆ.

ಸಾಮಾಜಿಕ ಕಲ್ಯಾಣದ ಉದ್ದೇಶ ಹೊಂದಿರುವ ಜೀವನಾಂಶ ಇತ್ಯಾದಿಗಳು ವಿಸ್ತೃತ ವ್ಯಾಖ್ಯಾನ ಹೊಂದಿವೆ. ಇವುಗಳನ್ನು ಕಠಿಣ ಕಾನೂನು ವ್ಯಾಖ್ಯಾನಕ್ಕೆ ಒಳಪಡಿಸುವ ಮೂಲಕ ಮಾನವೀಯ ಉದ್ದೇಶಗಳನ್ನು ಸೋಲಿಸಲು ಅವಕಾಶ ಕೊಡಲಾಗದು ಎಂದು ಪೀಠ ಹೇಳಿದೆ. ಸಿಆರ್‌ಪಿಸಿಯ ಸೆಕ್ಷನ್ 125ರ ಅನ್ವಯ ವಿರಸಿತ ಪತ್ನಿಗೆ ಜೀವನಾಂಶ ನೀಡುವಂತೆ ಎರಡನೇ ಗಂಡ ನಿಗೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ.

ಮೊದಲನೇ ಮದುವೆ ಕಾನೂನಾತ್ಮಕವಾಗಿ ಅಂತ್ಯಗೊಂಡಿಲ್ಲ ಎಂಬುದನ್ನು ಅರಿತಿದ್ದರೂ ಎರಡನೇ ಗಂಡ ಮದುವೆ ಮಾಡಿಕೊಂಡಿದ್ದ. ಮದುವೆಯ ಸೌಲಭ್ಯಗಳು ಬೇಕು, ಆದರೆ ಅದರಿಂದ ಉಂಟಾಗುವ ಕರ್ತವ್ಯ ಹಾಗೂ ಹೊಣೆಗಾರಿಕೆಗಳಿಂದ ತಪ್ಪಿಸಿಕೊಳ್ಳುತ್ತೇನೆ ಎಂದು ಹೇಳಲಾಗದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

2005ರಲ್ಲಿ ಮಹಿಳೆ ತನ್ನ ಮೊದಲ ಗಂಡನ ಜೊತೆ ಒಪ್ಪಂದ ಒಂದನ್ನು ಮಾಡಿಕೊಂಡು ದೂರವಾಗಿ ದ್ದರು. ಆದರೆ ಕಾನೂನಾತ್ಮಕವಾಗಿ ವಿಚ್ಛೇದನ ಪಡೆದಿರಲಿಲ್ಲ. ನಂತರ ನವಂಬರ್ 27, 2005ರಲ್ಲಿ ನೆರೆಮನೆ ಯವನ ಜೊತೆ ಸಂಬಂಧ ಬೆಳೆದು 2ನೇ ಮದು ವೆಯಾಗಿದ್ದರು. ಆದರೆ ವೈವಾಹಿಕ ವ್ಯತ್ಯಾಸಗಳ ಕಾರಣದಿಂದಾಗಿ 2ನೇ ಮದುವೆ ಮುರಿದು ಕೊಳ್ಳಲು ಮುಂದಾಗಿದ್ದರು. 2006ರ ಫೆಬ್ರವರಿ ಯಲ್ಲಿ ಕೌಟುಂಬಿಕ ನ್ಯಾಯಾಲಯ ವಿಚ್ಛೇದನ ನೀಡಿತ್ತು. ಆದರೆ ನಂತರ ದಂಪತಿ ಭಿನ್ನಾಭಿ ಪ್ರಾಯ ಬಗೆಹರಿಸಿಕೊಂಡು ಮರುಮದುವೆಯಾಗಿ ಹೈದರಾಬಾದ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದರು. ಜನವರಿ 2008ರಲ್ಲಿ ದಂಪತಿಗೆ ಹೆಣ್ಣು ಮಗು ಜನಿಸಿತ್ತು. ಆದರೆ, ಮತ್ತೆ ಕೌಟುಂಬಿಕ ಭಿನ್ನಾಭಿಪ್ರಾಯ ಉಂಟಾಗಿ ಎರಡನೇ ಗಂಡ ಹಾಗೂ ಮನೆಯವರ ವಿರುದ್ಧ ವರದಕ್ಷಿಣೆ ಪೀಡನೆಯ ಪ್ರಕರಣ ದಾಖಲಿಸಲಾಗಿತ್ತು.

ನಂತರ ಮಹಿಳೆ ಸಿಆರ್‌ಪಿಸಿ ಸೆಕ್ಷನ್ 125ರ ಅನ್ವಯ ತನಗೆ ಹಾಗೂ ಮಗಳಿಗೆ ಜೀವನಾಂಶ ನೀಡಬೇಕು ಎಂದು ಮನವಿ ಸಲ್ಲಿಸಿದ್ದರು. ಕೌಟುಂಬಿಕ ನ್ಯಾಯಾಲಯ ಜೀವನಾಂಶಕ್ಕೆ ಅನುಮತಿ ನೀಡಿತ್ತು. ಆದರೆ ತೆಲಂಗಾಣ ಹೈಕೋರ್ಟ್ ಈ ಅರ್ಜಿಯನ್ನು ತಳ್ಳಿ ಹಾಕಿತ್ತು. ನಂತರ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

## 'ಇನ್ನೂ ಆಂತರಿಕ ಕಚ್ಚಾಟ ನಡೆಸಿ'

ಶ್ರೀನಗರ, ಫೆ. 8 - ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯ ಗಳಿಸಿರುವ ಹಿನ್ನೆಲೆಯಲ್ಲಿ ಹೇಳಿಕೆ ನೀಡಿರುವ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ, 'ಇನ್ನೂ ಆಂತರಿಕ ಕಚ್ಚಾಟ ನಡೆಸಿ' ಎಂದು ಕಾಂಗ್ರೆಸ್ ಮತ್ತು ಎಎಪಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

# ಅತ್ಯಾಚಾರ ಸಾಬೀತಾದಾಗ ಪ್ರಕರಣ ವಜಾಗೊಳಿಸುವ ಸಂತ್ರಸ್ತೆ ಅರ್ಜಿಗೆ ಆದ್ಯತೆ ಇಲ್ಲ

ಕೊಚ್ಚಿ, ಫೆ. 8 - ಐಪಿಸಿ ಇಲ್ಲವೇ ಪೋಕ್ಸೋ ಕಾಯ್ದೆ ಅಡಿ ದಾಖಲಾದ ಪ್ರಕರಣದಲ್ಲಿ ಅತ್ಯಾಚಾರ ನಡೆದಿರುವುದು ಸಾಬೀತಾದಾಗ ಪ್ರಕರಣ ವಜಾಗೊಳಿಸಬೇಕು ಎಂಬ ಸಂತ್ರಸ್ತೆಯ ಅರ್ಜಿಗೆ ಆದ್ಯತೆ ಇರುವುದಿಲ್ಲ ಎಂದು ಕೇರಳ ಹೈಕೋರ್ಟ್ ತಿಳಿಸಿದೆ.

ಪೋಕ್ಸೊ ಹಾಗೂ ಐಪಿಸಿಯ ಹಲವು ಸೆಕ್ಷನ್‌ಗಳ ಅಡಿಯಲ್ಲಿ ನೃತ್ಯ ಶಿಕ್ಷಕ ಹಾಗೂ ಪತ್ನಿ ವಿರುದ್ಧ ದಾಖಲಿಸಲಾಗಿದ್ದ ಪ್ರಕರಣ ರದ್ದುಗೊಳಿಸಬೇಕು ಎಂದು ಸಂತ್ರಸ್ತೆ ಹಾಗೂ ತಾಯಿ ದಾಖಲಿಸಿದ್ದ ಮನವಿಯನ್ನು ಹೈಕೋರ್ಟ್ ತಳ್ಳಿ ಹಾಕಿದೆ.

ಚಲನಚಿತ್ರ ಹಾಗೂ ರಿಯಾಲಿಟಿ ಶೋಗಳಲ್ಲಿ ಅವಕಾಶ ಕೊಡಿಸುವುದಾಗಿ ಹೇಳಿ ಅಪ್ರಾಪ್ತಿಯಾಗಿದ್ದ ನನ್ನ ಜೊತೆ ನೃತ್ಯ ಶಿಕ್ಷಕ ಲೈಂಗಿಕ ಸಂಬಂಧ ಹೊಂದಿದ್ದಾಗಿ 2015ರಲ್ಲಿ ಪೊಲೀಸರಲ್ಲಿ ಸಂತ್ರಸ್ತೆ ದೂರು ದಾಖಲಿಸಿದ್ದರು.

ಲೈಂಗಿಕ ಸಂಬಂಧ ಬೆಳೆಸಿದ್ದ ನೃತ್ಯ ಶಿಕ್ಷಕ ಮದುವೆಯಾಗುವುದಾಗಿ ಭರವಸೆ ನೀಡಿದ್ದ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಹೇಳಲಾಗಿತ್ತು. ಆದರೆ ನೃತ್ಯ ಶಿಕ್ಷಕ ಬೇರೊಬ್ಬರ ಜೊತೆ ಮದುವೆಯಾಗಿದ್ದ. ಮದುವೆಯ ನಂತರ ಪತ್ನಿಗೆ ಹಿಂದಿನ ಸಂಬಂಧದ ಬಗ್ಗೆ ತಿಳಿಸಿದ್ದ. ಆಗ ಶಿಕ್ಷಕನ ಪತ್ನಿ ನನ್ನ ಬಳಿ ಬಂದು, ನಾನೂ ಸಹ ಆತನನ್ನು ಮದುವೆಯಾಗಬಹುದು ಎಂದು ತಿಳಿಸಿದ್ದಾಗಿ ದೂರಿನಲ್ಲಿ ಹೇಳಲಾಗಿತ್ತು.

ಆನಂತರ ನೃತ್ಯ ಶಿಕ್ಷಕನ ಜೊತೆಗಿನ ಲೈಂಗಿಕ ಸಂಬಂಧಕ್ಕೆ ಆತನ ಪತ್ನಿ ಸಹ ಸಹಕಾರ ನೀಡಿದ್ದಾಗಿ ಪೊಲೀಸರಿಗೆ ತಿಳಿಸಲಾಗಿತ್ತು.

ಆದರೆ 2020ರಲ್ಲಿ ಸಂತ್ರಸ್ತೆ ಪೊಲೀಸರ ಎದುರು ಬೇರೆ ಹೇಳಿಕೆ ನೀಡಿದ್ದರು.

ತನ್ನ ಮೇಲೆ ಅತ್ಯಾಚಾರ ಇಲ್ಲವೇ ಲೈಂಗಿಕ ಪೀಡನೆ ನಡೆದಿಲ್ಲ, ಶಿಕ್ಷಕನ ಪತ್ನಿ ಈ ಕೃತ್ಯಗಳಿಗೆ ಸಹಕಾರ ನೀಡಿಲ್ಲ. ನಾನೀಗ ಪ್ರಾಪ್ತ ವಯಸ್ಸಿಗೆ ಬಂದಿದ್ದೇನೆ ಈ ಹೇಳಿಕೆ ದಾಖಲಿಸಿಕೊಳ್ಳಬೇಕು ಎಂದು ಮ್ಯಾಜಿಸ್ಟ್ರೇಟರ ಎದುರು ತಿಳಿಸಿದ್ದರು.

ನೃತ್ಯ ಶಿಕ್ಷಕ ಹಾಗೂ ಪತ್ನಿಯ ವಿರುದ್ಧ ಆರೋಪ ಮಾಡುವಂತೆ ತಮ್ಮನ್ನು ಬಲವಂತ ಪಡಿಸಲಾಗಿತ್ತು ಎಂದು ಸಂತ್ರಸ್ತೆ ಹೇಳಿದ್ದರು. ಸಂತ್ರಸ್ತೆಯ ತಾಯಿ ಸಹ ದೂರೊಂದನ್ನು ನೀಡಿ ಪ್ರಕರಣ ವಜಾಗೊಳಿಸಬೇಕು ಎಂದು ಕೋರಿದ್ದರು.

ಪ್ರಕರಣ ವಜಾಗೊಳಿಸಬೇಕು ಎಂಬ ಮನವಿಯನ್ನು ತಳ್ಳಿ ಹಾಕಿರುವ ಹೈಕೋರ್ಟ್, ಈ ಪ್ರಕರಣ ಗಂಭೀರ ಅಪರಾಧಕ್ಕೆ ಸಂಬಂಧಿಸಿದ್ದಾಗಿದೆ. ಮೇಲ್ನೋಟಕ್ಕೆ ಕಂಡು ಬರುವಂತೆ ಪ್ರಕರಣಕ್ಕೆ ಸಾಕ್ಷಿಗಳಿವೆ ಎಂದು ತಿಳಿಸಿದೆ.

ಐಪಿಸಿ ಹಾಗೂ ಪೋಕ್ಸೋ ಕಾಯ್ದೆಗಳ ಅಡಿ ದಾಖಲಾದ ಪ್ರಕರಣದಲ್ಲಿ ಅತ್ಯಾಚಾರ ಮೇಲ್ನೋಟಕ್ಕೆ ಕಂಡುಬರುವಂತೆ ಸಾಬೀತಾದಾಗ, ಪ್ರಕರಣ ರದ್ದುಗೊಳಿಸಬೇಕು ಎಂಬ ಸಂತ್ರಸ್ತೆಯ ಹೇಳಿಕೆಗೆ ಆದ್ಯತೆ ಇರುವುದಿಲ್ಲ ಎಂದು ಹೈಕೋರ್ಟ್ ಹೇಳಿದೆ.

ವಿಚಾರಣಾ ನ್ಯಾಯಾಲಯ ತ್ವರಿತವಾಗಿ ಪ್ರಕರಣ ಇತ್ಯರ್ಥಪಡಿಸಬೇಕು.

ಈ ಆದೇಶ ದೊರೆತ ಮೂರು ತಿಂಗಳ ಒಳಗೆ ಪ್ರಕರಣ ಇತ್ಯರ್ಥಪಡಿಸಬೇಕು ಎಂದು ಹೈಕೋರ್ಟ್ ನಿರ್ದೇಶನ ನೀಡಿದೆ.

# ತೃಪ್ತಿ - ಮಾನವೀಯತೆಯಿಂದ ಶಾಂತಿ - ಸೌಹಾರ್ದತೆ ಸಾಧ್ಯ

(1ನೇ ಪುಟದಿಂದ) ಶಾಂತಿ ಮತ್ತು ಸೌಹಾರ್ದಯುತವಾಗಿ ಬಾಳುವುದನ್ನು ಕಲಿಸಿಕೊಡಬೇಕಾದ ಅಗತ್ಯವಿದೆ ಎಂದರು.

ವಿದ್ಯಾರ್ಥಿಗಳಲ್ಲಿ ಕಾನೂನಿನ ಅರಿವು ಮೂಡಿಸುವ ಸಲುವಾಗಿ ನಿನ್ನೆಯವರೆಗೆ 1860 ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಅವರಲ್ಲಿ ಕಾನೂನು, ನ್ಯಾಯಾಲಯಗಳ ಪಾತ್ರದ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಿದ್ದೇನೆ ಎಂದರು.

ಹಿರಿಯ ವಕೀಲರಾದ ಅಶೋಕ ಹಾರನಹಳ್ಳಿ ಮಾತನಾಡಿ, ವ್ಯಕ್ತಿಗಳ ಸಮಷ್ಠಿ ಇರುವ ವ್ಯವಸ್ಥೆಗೆ ಸಮಾಜ ಎನ್ನುತ್ತೇವೆ. ಸಮಾಜದ ಪರಿಸ್ಥಿತಿ ಒಳ್ಳೆಯ ಕೆಲಸಗಳಿಗೆ ಪ್ರಚಾರ ಸಿಗುವುದಿಲ್ಲ. ಸಮಾಜದ ಉನ್ನತ ಸ್ಥಾನದಲ್ಲಿರುವವರು ಮಾದರಿಯಾಗಿ ನಡೆದು ಕೊಳ್ಳಬೇಕಾದ ಅಗತ್ಯವಿದೆ. ಕಾರಣಾಂತರಗಳಿಂದ ಉನ್ನತ ಸ್ಥಾನದಲ್ಲಿರುವವರು ನಡವಳಿಕೆಯಲ್ಲಿ ಔನ್ನತ್ಯ ಕಾಣದಿರುವುದು ಸಮಾಜದಲ್ಲಿನ ಅವನತಿಗೆ ಕಾರಣವಾಗಿದೆ ಎಂದರು.

ವ್ಯಕ್ತಿಗೆ ಶಾಸನದ ಭಯ ಇರಬೇಕು. ಸಮಾಜದಲ್ಲಿ ಸರಿಯಾದ ಮಾರ್ಗದಲ್ಲಿ ನಡೆಯುವ ಅವಕಾಶವಿರುತ್ತದೆ. ಸಮಾಜದಲ್ಲಿ ಗೌರವವಿರಬೇಕು ಎಂಬುದು ಸಮಾಜದ ಭಯ. ಆತ್ಮಸಾಕ್ಷಿಗೆ ಉತ್ತರ ಕೊಡಬೇಕಾದದು ಆತ್ಮಸಾಕ್ಷಿ ಭಯ. ತಪ್ಪು-ಸರಿ ವಿವೇಚನಾ ಶಕ್ತಿ ಇದೆ. ಜೀವನದಲ್ಲಿ ತಪ್ಪು-ಸರಿ ಬಗ್ಗೆ ಆಲೋಚನೆ ಮಾಡಿ ಹೆಜ್ಜೆ ಇಡಬೇಕಾಗುತ್ತದೆ ಎಂದು ಹೇಳಿದರು.

ಶಾಸಕಾಂಗ, ಕಾರ್ಯಾಂಗ ಜನಪರ ನಿರ್ಣಯಗಳನ್ನು ತೆಗೆದುಕೊಳ್ಳುವುದಿಲ್ಲವೋ, ಆಗ ಸರ್ಕಾರವನ್ನು ನ್ಯಾಯಾಂಗ ನಿಯಂತ್ರಣ ಮಾಡಿ ಸರಿಯಾದ ನಿರ್ಧಾರವನ್ನು ಕೈಗೊಳ್ಳುತ್ತದೆ. ಜನರನ್ನು ಸೋಮಾರಿಗಳನ್ನು ಮಾಡುವ ಎಲ್ಲಾ ಸರ್ಕಾರಗಳು ಉಚಿತ ಯೋಜನೆಗಳನ್ನು ಜಾರಿ ಮಾಡುತ್ತಿವೆ. ಇದರಿಂದ ಖಜಾನೆ ಖಾಲಿಯಾಗಿ ಸಾರ್ವಜನಿಕ ಅಭಿವೃದ್ಧಿ ಕೆಲಸಗಳ ಹಿನ್ನಡೆಗೆ ಕಾರಣವಾಗಿದೆ ಎಂದರು.

ಬೆಂಗಳೂರಿನ ಜಿಲ್ಲಾ ನ್ಯಾಯಾಧೀಶರಾದ ಹೆಚ್.ಎ. ಮೋಹನ್ ಮಾತನಾಡಿ, ನೀರಾವರಿ ಜನರ ಜೀವನದ ಒಂದು ಭಾಗ. ರಸ್ತೆ, ಮಾರುಕಟ್ಟೆ, ನೀರಾವರಿ ಸೌಲಭ್ಯಗಳು ಪ್ರಮುಖವಾದವು. ಸಿರಿಗೆರೆ ಜಗದ್ಗುರುಗಳು ರೈತರ ಬದುಕು ಹಸನಾಗಲೆಂದು ಕೆರೆಗಳಿಗೆ ನೀರುಣಿಸುವ ಯೋಜನೆಯ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುತ್ತಿರುವುದು ಅತ್ಯಂತ ಮಹತ್ವದ ಕಾರ್ಯ ಎಂದು ಬಣ್ಣಿಸಿದರು.

ನಾನು ಸಹ ನನಗೆ ಜನ್ಮಕೊಟ್ಟ ಹಳ್ಳಿಗೆ ಏನಾದರೂ ಮಾಡಬೇಕೆಂಬ ಇಚ್ಛಾಶಕ್ತಿಯಿಂದಾಗಿ ಸರ್ಕಾರಿ ಅಧಿಕಾರಿಗಳ ಸಹಕಾರದೊಂದಿಗೆ ನನ್ನೂರಿನ ಶಾಲೆಯನ್ನು ಅಭಿವೃದ್ಧಿಪಡಿಸಿ, ರಸ್ತೆ, ಚೆಕ್ ಡ್ಯಾಂ ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರೊಂದಿಗೆ ಮಾದರಿ ಗ್ರಾಮವನ್ನಾಗಿ ಮಾಡಿದ ತೃಪ್ತಿ ನನ್ನದಾಗಿದೆ ಎಂದರು.

ನಿವೃತ್ತ ನ್ಯಾಯಮೂರ್ತಿ ಪ್ರಭಾಕರ ಶಾಸ್ತ್ರಿ ಮಾತನಾಡಿ, ಸಮಾಜ ಮತ್ತು ನ್ಯಾಯಾಲಯಕ್ಕೆ ಗಾಢವಾದ ಸಂಬಂಧವಿದೆ. ಮಾನವ ಸಂಘಜೀವಿ. ಅವನು ಏಕಾಂಗಿ ಜೀವನ ನಡೆಸಲು ಇಷ್ಟಪಡುವುದಿಲ್ಲ. ಬೇರೆ ಜನರ ಜೊತೆ ಬೆರೆತು ಜೀವನ ನಡೆಸಲು ಇಷ್ಟಪಟ್ಟಾಗ ಸಮೂಹ ಏರ್ಪಡುತ್ತದೆ. ವಿಚಾರ ವಿನಿಮಯವಾಗಿ, ಅಭಿಪ್ರಾಯ-ಭಿನ್ನಾಭಿಪ್ರಾಯಗಳು ಬರುತ್ತವೆ. ಸಮೂಹ ರೀತಿ, ರಿವಾಜು, ನಿಯಮಗಳು ಇರಲಿ ಎಂದು ಮಾಡಿಕೊಂಡಾಗ ಅದು ಸಮಾಜ ವಾಗಿ ಮಾರ್ಪಡುತ್ತದೆ ಎಂದು ಹೇಳಿದರು.

ಎಲ್ಲಾ ಸಮಾಜಕ್ಕೂ ಮೂಲಧಾರ ದಯೆ. ಉತ್ತಮ ಜೀವನ ನಡೆಸಿಕೊಡು ಕಲೆಯನ್ನು ಕಲಿಸಿಕೊಡುತ್ತದೆ ಜಾತ್ಯತೀತವಾಗಿ, ಧರ್ಮನಿರಪೇಕ್ಷ ವಾಗಿರಬೇಕೆಂಬದು ನನ್ನ ಅಪೇಕ್ಷೆ. ಯಾವುದೇ ಧರ್ಮಕ್ಕೂ ದಯೆ ಅವಶ್ಯ ಎಲ್ಲಾ ಧರ್ಮಗಳಿಗೂ ರೀತಿ,ರಿವಾಜು, ನೀತಿ, ನಿಯಮಗಳು ಇರುತ್ತವೆ ಎಂದರು.

ವಿವಿಧ ರೀತಿಗಳ ನ್ಯಾಯಾಲಯ, ವಿವಿಧ ರೀತಿಯ ವ್ಯಾಜ್ಯಗಳಿವೆ. ಪ್ರಾಥಮಿಕ ಹಂತದಿಂದ ಅಂತರರಾಷ್ಟ್ರೀಯ ನ್ಯಾಯಾಲಯಗಳಿವೆ. ಇವೆಲ್ಲವುಗಳಿಗೂ ಮೀರಿ ಮೇಲೊಂದು ನ್ಯಾಯಾಲಯ ಇದೆ. ಸಮಾಜದ ಆರೋಗ್ಯ ಕಾಪಾಡುವಲ್ಲಿ ನ್ಯಾಯಾಲಯಗಳ ಪಾತ್ರ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಹೇಳಿದರು.

ನ್ಯಾಯಮೂರ್ತಿಗಳಾದ ಕೃಷ್ಣಾ ಎಸ್. ದೀಕ್ಷಿತ್, ಹಿರಿಯ ವಕೀಲರಾದ ಸಂದೀಪ್ ಪಾಟೀಲ್ ಮಾತನಾಡಿದರು. ಹಿರಿಯ ವಕೀಲರಾದ ಶಶಿಕಾಂತ್, ಸಹಾಯಕ ಸರ್ಕಾರಿ ಅಭಿಯೋಜಕರಾದ ಕೆ.ಬಿ. ವಾಣಿ ಗೌಡ, ಚಿತ್ರದುರ್ಗ ಜಿಲ್ಲಾ ನ್ಯಾಯಾಧೀಶ ಶಂಕರಪ್ಪ, ಅಂಚೇ ಅಧೀಕ್ಷಕಿ ಉಷಾ ಮತ್ತಿತರರು ಉಪಸ್ಥಿತರಿದ್ದರು.

ಇದೇ ವೇಳೆ ಹಿರಿಯ ಜಗದ್ಗುರುಗಳಾದ ಗುರುಶಾಂತ ದೇಶಿಕೇಂದ್ರ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ ಭಾವಚಿತ್ರವಿರುವ ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಲಾಯಿತು.

## ಸದ್ಧರ್ಮ ನ್ಯಾಯಪೀಠದಲ್ಲಿ ರಾಜೀ ಸಂಧಾನಗಳೇ ನಮ್ಮ ಗುರಿ

ಭರಮಸಾಗರ, ಫೆ. 8- ನ್ಯಾಯಾಲಯಗಳಲ್ಲಿ ತೀರ್ಪು ಒಬ್ಬರ ಪರ ಇರುತ್ತದೆ. ಒಬ್ಬರು ಸೋತರೆ, ಮತ್ತೊಬ್ಬರು ಗೆಲ್ಲುತ್ತಾರೆ. ಆದರೆ ನಮ್ಮ ಸದ್ಧರ್ಮ ನ್ಯಾಯಪೀಠದಲ್ಲಿ ಇಬ್ಬರೂ ಗೆಲ್ಲುತ್ತಾರೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕಾನೂನಿಗಿಂತ ಧರ್ಮ ಹೆಚ್ಚು ಮುಖ್ಯವಾದುದು. ನಮ್ಮ ಪೀಠದಲ್ಲಿ ಬಂದಂತಹ ವ್ಯಾಜ್ಯಗಳಲ್ಲಿ ದೂರುದಾರರು ಮತ್ತು ಎದುರುದಾರರು ಇಬ್ಬರ ವಾದ-ವಿವಾದಗಳನ್ನು ಆಲಿಸಿ, ಅದಕ್ಕೆ ಸರಿಯಾದ ತೀರ್ಮಾನ ಕೈಗೊಂಡು ರಾಜೀ ಸಂಧಾನ ಮಾಡುವ ವ್ಯವಸ್ಥೆ ಇದೆ ಎಂದರು.

ನ್ಯಾಯಾಲಯದಲ್ಲಿ ಒಬ್ಬರು ಮಾತ್ರ ಗೆಲುತ್ತಾರೆ. ಒಬ್ಬರು ಸೋಲುತ್ತಾರೆ. ಸೋತ ವ್ಯಕ್ತಿ ಮುಂದಿನ ನ್ಯಾಯಾಯಲದ ಮೊರೆ ಹೋಗುತ್ತಾನೆ ಎಂದು ಹೇಳಿದರು.

ಕಾಣಿಕೆ ವಾಪಾಸ್: ಇಂದಿನ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಎಲ್ಲಾ ನ್ಯಾಯಾಧೀಶರುಗಳೂ ಸಹ ತಮಗೆ ಗೌರವಪೂರ್ವಕವಾಗಿ ನೀಡಿದ್ದ ಕಾಣಿಕೆಯನ್ನು ವಾಪಾಸ್ ಮಾಡಿದ್ದು, ಆ ಹಣವನ್ನು ಸಿರಿಗೆರೆ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಬಳಕೆ ಮಾಡಲಾಗುವುದು ಎಂದು ಶ್ರೀಗಳು ತಿಳಿಸಿದರು.

# ಭರಮಸಾಗರದ ತರಳಬಾಳು ಹುಣ್ಣಿಮೆಯಲ್ಲಿ ಇಂದು

ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಇಂದು ಸಂಜೆ 6.30 ಕ್ಕೆ 'ಆರೋಗ್ಯ ಮತ್ತು ಸಮಾಜ' ವಿಷಯ ಕುರಿತು ನಡೆಯುವ ಉಪನ್ಯಾಸ ಕಾರ್ಯಕ್ರಮದಲ್ಲಿ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಶ್ರೀ ವಚನಾನಂದ ಸ್ವಾಮೀಜಿ ಆಶೀರ್ವಚನ ನೀಡುವರು. ಮುಖ್ಯ ಅತಿಥಿಗಳಾಗಿ ಸಚಿವ ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಡಾ. ಸಿ.ಎನ್. ಮಂಜುನಾಥ್ ಆಗಮಿಸಲಿದ್ದಾರೆ.

ನವದೆಹಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪಾಸ್‌ಪೋರ್ಟ್ ಅಧಿಕಾರಿ ಡಾ.ಕೆ.ಜೆ. ಶ್ರೀನಿವಾಸ್, ಬೆಂಗಳೂರು ಆಸ್ಟರ್ ಆಸ್ಪತ್ರೆಯ ಮುಖ್ಯಸ್ಥರೂ, ಲೀಡ್ ಕನ್ಸಲ್ಟೆಂಟ್ ಡಾ. ಸಿ.ಎನ್. ಪಾಟೀಲ್, ಬೆಂಗಳೂರು ನಾರಾಯಣ ನೇತ್ರಾಲಯದ ನೇತ್ರ ತಜ್ಞ ಡಾ. ಬಿ. ಪೂರ್ಣಚಂದ್ರ, ಡಾ. ಜಿ. ಸುನೀಲ್ ದಾವಣಗೆರೆ, ಹಾಸನ ವೈದ್ಯಕೀಯ ಕಾಲೇಜಿನ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಬಿ.ಎಸ್. ಗಿರಿಜಾ, ಕೂಡ್ಲಿಗಿ ಹಾಸ್ಯ ಭಾಷಣಕಾರ ಕೋಗಳಿ ಕೊಟ್ರೇಶ್ ಉಪನ್ಯಾಸ ನೀಡಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್, ಹಾಸನ ಜನಪ್ರಿಯ ಆಸ್ಪತ್ರೆ ವೈದ್ಯ ಡಾ. ಅಬ್ದುಲ್ ಬಷೀರ್ ಭಾಗವಹಿಸಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಿರಿಗೆರೆ ಅಕ್ಕನ ಬಳಗದಿಂದ ವಚನಗೀತೆ, ಚನ್ನಗಿರಿ ತರಳಬಾಳು ಶಾಲೆಯ ವಿದ್ಯಾರ್ಥಿಗಳಿಂದ ವಚನ ನೃತ್ಯ, ಸಿರಿಗೆರೆ ಬಿ.ಲಿಂಗಯ್ಯ ವಸತಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಜಾನಪದ ಸಿರಿ ಯಕ್ಷಗಾನ, ತೋಳಹುಣಸೆ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಸತಿಯುತ ಶಾಲೆಯ ವಿದ್ಯಾರ್ಥಿನಿಯರ ಭರತನಾಟ್ಯ ಹಾಗೂ ಕಡೂರು ಸ್ನೇಹಮಯಿ ವಿವೇಕಾನಂದ ಯೋಗ ಕೇಂದ್ರದ ಯೋಗ ಪಟುಗಳಿಂದ ಯೋಗ ಪ್ರದರ್ಶನ ಏರ್ಪಡಿಸಲಾಗಿದೆ.

# ಐಎನ್‌ಡಿಐಎ ಮೈತ್ರಿಗೆ ಸವಾಲಾದ ದೆಹಲಿ ಚುನಾವಣೆ

## ಮಿತ್ರರ ಕಲಹದ ನಡುವೆ ಅರಳಿದ ಕಮಲ

ನವದೆಹಲಿ, ಫೆ 8 - ಲೋಕಸಭಾ ಚುನಾವಣೆಯಲ್ಲಿ ಉತ್ತಮ ಪ್ರದರ್ಶನ ನೀಡಿದ ಕೇವಲ ಎಂಟು ತಿಂಗಳಲ್ಲೇ ಐಎನ್‌ಡಿಐಎ ಮೈತ್ರಿಕೂಟಕ್ಕೆ ಸಾಲು ಸಾಲು ಹಿನ್ನಡೆಗಳು ಎದುರಾಗಿವೆ. ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿಕೂಟದ ಸದಸ್ಯರೇ ಪರಸ್ಪರ ಕೆಸರೆರೆಚಾಟ ನಡೆಸಿ, ಬಿಜೆಪಿ ಗೆಲುವಿಗೆ ದಾರಿ ಮಾಡಿಕೊಟ್ಟಿವೆ.

ಆಂತರಿಕ ಕಚ್ಚಾಟ ಹಾಗೂ ಪಕ್ಷಗಳ ಮಹತ್ವಾಕಾಂಕ್ಷೆಗಳು ಮೈತ್ರಿಕೂಟದ ಭವಿಷ್ಯ ಮಸುಕಾಗುವಂತೆ ಮಾಡಿವೆ.

ದೆಹಲಿಯಲ್ಲಿ ಆಮ್ ಆದ್ಮಿ ಪಾರ್ಟಿ ಸರ್ಕಾರ ಪತನಗೊಂಡ ನಂತರ, ದೇಶದಲ್ಲಿ ಐಎನ್‌ಡಿಐಎ ಮೈತ್ರಿಕೂಟದ ಪಕ್ಷಗಳ ಆಡಳಿತ ಇರುವ ರಾಜ್ಯಗಳು ಎಂಟಕ್ಕೆ ಸೀಮಿತವಾಗಿವೆ. ಕರ್ನಾಟಕ, ಜಮ್ಮು ಮತ್ತು ಕಾಶ್ಮೀರ, ತೆಲಂಗಾಣ, ಕೇರಳ, ತಮಿಳುನಾಡು, ಹಿಮಾಚಲ ಪ್ರದೇಶ, ಜಾರ್ಖಂಡ್ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ವಿರೋಧಿ ಮೈತ್ರಿ ಬಣದ ಸರ್ಕಾರಗಳಿವೆ.

ಲೋಕಸಭಾ ಚುನಾವಣೆ ವೇಳೆ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದ್ದ ಐಎನ್‌ಡಿಐಎ ಪಕ್ಷಗಳು, ವಿಧಾನಸಭಾ ಚುನಾವಣೆ ವೇಳೆ ಪರಸ್ಪರ ಎದುರಾಗಿವೆ. ಇದು ಬಿಜೆಪಿ ಪ್ರಬಲಗೊಳ್ಳಲು ನೆರವಾಗಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಲು ಐಎನ್‌ಡಿಐಎ ಬಣಕ್ಕೆ ಸಾಧ್ಯವಾಗಿರಲಿಲ್ಲ. ಆದರೆ ಬಿಜೆಪಿ ಸ್ವಂತ ಬಲದಿಂದ ಬಹುಮತಕ್ಕೆ ಬರದಂತೆ ತಡೆಯಲು ಸಾಧ್ಯವಾಗಿತ್ತು. ಈ ಮೈತ್ರಿ ರಾಷ್ಟ್ರ ರಾಜಕಾರಣಕ್ಕೆ ಮಾತ್ರ ಸೀಮಿತ, ರಾಜ್ಯಗಳಲ್ಲಿ ಸ್ಥಳೀಯ ವಿಷಯಗಳಿಗೆ ಅನುಗುಣವಾಗಿ ಮೈತ್ರಿ ಮಾಡಿಕೊಳ್ಳುವುದಾಗಿ ಪಕ್ಷಗಳು ಹೇಳಿದ್ದವು.

ಆದರೆ ರಾಜ್ಯಗಳ ಚುನಾವಣೆಯಲ್ಲಿ ಪಕ್ಷಗಳು ಪರಸ್ಪರರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿವೆ. ಇದರಿಂದಾಗಿ ಮೈತ್ರಿಕೂಟದಲ್ಲಿ ಬಿರುಕಾಗಿದೆ. ದೆಹಲಿ ವಿಧಾನಸಭಾ ಚುನಾವಣೆ ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.

ಕಾಂಗ್ರೆಸ್ ಪಕ್ಷವು ದೆಹಲಿ ಚುನಾವಣೆ ವೇಳೆ ಆಮ್ ಆದ್ಮಿ ಪಾರ್ಟಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿತ್ತು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ರಾಹುಲ್ ಗಾಂಧಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರಾ ಅವರು ಆಮ್ ಆದ್ಮಿ ಪಾರ್ಟಿ ಹಾಗೂ ಅದರ ನಾಯಕ ಅರವಿಂದ್ ಕೇಜ್ರಿವಾಲ್ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಚುನಾವಣೆ ವೇಳೆ ವಿಪಕ್ಷ ಮೈತ್ರಿ ಬಣದ ಸಮಾಜವಾದಿ ಪಾರ್ಟಿ ಹಾಗೂ ತೃಣ ಮೂಲ ಕಾಂಗ್ರೆಸ್ ಪಕ್ಷಗಳು ಕೇಜ್ರಿವಾಲ್ ಅವರನ್ನು ಬೆಂಬಲಿಸಿದ್ದವು. ಬಿಜೆಪಿ ಎದುರಿಸಲು ಆಮ್ ಆದ್ಮಿ ಪಾರ್ಟಿಯಿಂದ ಮಾತ್ರ ಸಾಧ್ಯ ಎಂದು ಹೇಳಿದ್ದವು.

ಇದಕ್ಕೂ ಮೊದಲು ಹರಿಯಾಣ ವಿಧಾನಸಭಾ ಚುನಾವಣೆಯಲ್ಲೂ ಸಹ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಾರ್ಟಿಗಳು ಮೈತ್ರಿ ಮಾಡಿಕೊಳ್ಳಲು ವಿಫಲವಾಗಿದ್ದವು.

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಐಎನ್‌ಡಿಐಎ ಮೈತ್ರಿಕೂಟ ಒಗ್ಗಟ್ಟಿನಿಂದ ಸ್ಪರ್ಧಿಸಲು ಅವಕಾಶವಿದೆ. ಆದರೆ ಪಶ್ಚಿಮ ಬಂಗಾಳ ಹಾಗೂ ಉತ್ತರ ಪ್ರದೇಶ ಚುನಾವಣೆಗಳು ಮೈತ್ರಿಗೆ ಸವಾಲು ತರಲಿವೆ.

ದೆಹಲಿ ವಿಧಾನಸಭಾ ಚುನಾವಣಾ ಸೋಲಿಗೆ ಮೈತ್ರಿ ಬಣದ ಪಕ್ಷಗಳ ಕಿತ್ತಾಟವೇ ಕಾರಣ ಎಂದು ಆಕ್ಷೇಪ ವ್ಯಕ್ತವಾಗುತ್ತಿದೆ. ನ್ಯಾಷನಲ್ ಕಾನ್ಫರೆನ್ಸ್, ಸಿಪಿಐ(ಎಂ) ಹಾಗೂ ಐಯುಎಂಎಲ್ ಪಕ್ಷಗಳು ದೆಹಲಿ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಸ್ಪರ್ಧಿಸಲು ಸಾಧ್ಯವಾಗದೇ ಇರುವ ಬಗ್ಗೆ ಟೀಕೆಗಳನ್ನು ವ್ಯಕ್ತಪಡಿಸಿವೆ.

ಲೋಕಸಭಾ ಚುನಾವಣೆಯಲ್ಲಷ್ಟೇ ಒಗ್ಗಟ್ಟು ಪ್ರದರ್ಶಿಸಿ, ನಂತರ ರಾಜ್ಯ ವಿಧಾನ ಸಭಾ ಚುನಾವಣೆಗಳಲ್ಲಿ ವೈಯಕ್ತಿಕ ಭಿನ್ನಾಭಿಪ್ರಾಯ ಹಾಗೂ ಮಹತ್ವಾಕಾಂಕ್ಷೆ ಮುಂದಿಟ್ಟರೆ ಬಿಜೆಪಿಗೆ ಲಾಭವಾಗಲಿದೆ ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಣೆ ಮಾಡಲಾಗುತ್ತಿದೆ.

## ನಗರದಲ್ಲಿ ಇಂದು ಆಧ್ಯಾತ್ಮಿಕತೆ-ಧ್ಯಾನ ಕಾರ್ಯಾಗಾರ

ಎಸ್. ನಿಜಲಿಂಗಪ್ಪ ಬಡಾವಣೆಯ ಶ್ರೀ ಶಾರದಾಂಬ ದೇವಸ್ಥಾನದ ಪಕ್ಕದಲ್ಲಿರುವ ಶ್ರೀ ನಿಮಿಷಾಂಬ ಸಮುದಾಯ ಭವನದಲ್ಲಿ ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟೀಸ್ ಮೂವ್‌ಮೆಂಟ್ ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿಯವರ ಆಚರಣೆಯಲ್ಲಿ ಆಧ್ಯಾತ್ಮಿಕತೆ-ಧ್ಯಾನ ಕಾರ್ಯಾಗಾರ ಇಂದು ನಡೆಯಲಿದೆ. ಬೆಳಿಗ್ಗೆ 9.30 ರಿಂದ ಸಂಜೆ 5 ಗಂಟೆಯವರೆಗೆ ಕಾರ್ಯಾಗಾರ ನಡೆಯಲಿದ್ದು, ಕರ್ನಾಟಕ ಧ್ಯಾನ ಪ್ರಗತಿ ಪರಿಷತ್ (ಹೊಸಪೇಟೆ) ಅಧ್ಯಕ್ಷ ಟಿ. ಹರಿಶಂಕರ್ ಮಾರ್ಗದರ್ಶಕರಾಗಿ ಉಪಸ್ಥಿತರಿರುವರು.

## ಈರೋಡ್ ಪೂರ್ವ ಕ್ಷೇತ್ರದಲ್ಲಿ ಡಿಎಂಕೆಗೆ ಗೆಲುವು

ಈರೋಡ್, ಫೆ. 8 - ತಮಿಳುನಾಡಿನ ಈರೋಡ್ ಪೂರ್ವ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಆಡಳಿತಾರೂಢ ಡಿಎಂಕೆ ಗೆಲುವು ಸಾಧಿಸಿದೆ. ಡಿಎಂಕೆ ಪಕ್ಷದ ವಿ.ಸಿ. ಚಂದಿರಕುಮಾರ್ ಅವರು ಎನ್.ಟಿ.ಕೆ. ಪಕ್ಷದ ಎಂ.ಕೆ. ಸೀತಾಲಕ್ಷ್ಮಿ ಅವರನ್ನು 91,558 ಮತಗಳ ಅಂತರದಿಂದ ಸೋಲಿಸಿದ್ದಾರೆ. ಸೀತಾ ಲಕ್ಷ್ಮಿ ಅವರು ಠೇವಣಿ ಕಳೆದುಕೊಂಡಿದ್ದಾರೆ. 6,109 ಮತಗಳೊಂದಿಗೆ ನೋಟಾ ಮೂರನೇ ಸ್ಥಾನದಲ್ಲಿದೆ. ಚಂದಿರಕುಮಾರ್ ಅವರು 1,15,709 ಮತಗಳನ್ನು ಪಡೆದಿದ್ದಾರೆ. ಸೀತಾಲಕ್ಷ್ಮಿ 24,151 ಮತಗಳೊಂದಿಗೆ ದೂರದ ಎರಡನೇ ಸ್ಥಾನದಲ್ಲಿದ್ದಾರೆ. ಡಿಎಂಕೆ ಅಭ್ಯರ್ಥಿ ಚಲಾವಣೆಯಾದ ಮತಗಳಲ್ಲಿ ಶೇಕಡ 75ರಷ್ಟನ್ನು ಪಡೆದುಕೊಂಡಿದ್ದಾರೆ.

# ರಾಣೇಬೆನ್ನೂರಿನಲ್ಲಿ ಫುಟ್‌ಪಾತ್ ಅಂಗಡಿಗಳ ತೆರವು



ರಾಣೇಬೆನ್ನೂರು,ಫೆ.8- ನಗರದ ಹಳೇ ಪಿ.ಬಿ.ರಸ್ತೆಯ ಪಂಚಮುಖಿ ಆಂಜನೇಯ ದೇವಸ್ಥಾನ ಕ್ರಾಸ್‌ಬಳಿ ಫುಟ್‌ಪಾತ್‌ನಲ್ಲಿರುವ ಅನಧಿಕೃತ ಶೆಡ್ ಅಂಗಡಿಗಳನ್ನು ನಗರಸಭೆ ಪೌರಾಯುಕ್ತ ಪಕ್ಕೀರಪ್ಪ ಇಂಗಳಗಿ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ತೆರವುಗೊಳಿಸಲಾಯಿತು.

ಈ ಕುರಿತು ಪೌರಾಯುಕ್ತ ಪಕ್ಕೀರಪ್ಪ ಇಂಗಳಗಿ ಮಾತನಾಡಿ, ಫುಟ್‌ಪಾತ್ ಒತ್ತುವರಿ ಮಾಡಿಕೊಂಡಿ ರುವುದರಿಂದ ಸಾರ್ವಜನಿಕರು ರಸ್ತೆ ಮೇಲೆ ನಡೆದುಕೊಂಡು ಸಾಗಬೇಕಾದ ಅನಿವಾರ್ಯ ಪರಿಸ್ಥಿತಿ ತಲೆದೋರಿದೆ. ಇದರಿಂದ ಅಪಘಾತಗಳು ಸಂಭವಿಸುವ ಸಾಧ್ಯವಿರುವುದ ರಿಂದ ಸಾರ್ವಜನಿಕರ ಪ್ರಾಣ ಹಾನಿ ತಪ್ಪಿಸುವ ನಿಟ್ಟಿನಲ್ಲಿ ಅಂಗಡಿ ಮಾಲೀಕರಿಗೆ ಅರಿವು ಮೂಡಿಸುವ ಕೆಲಸ ಮಾಡಲಾಗಿತ್ತು.

ರಸ್ತೆಯ ಫುಟ್‌ಪಾತ್‌ನಲ್ಲಿ ಖಾಯಂ ಶೆಡ್ ನಿರ್ಮಾಣ ಮಾಡಿ ಸರಿಯಾಗಿ ಸ್ವಚ್ಚತೆ ಮಾಡಿಕೊಳ್ಳದ ಕಾರಣ ಅವರಿಗೆ ಸಾಕಷ್ಟು ಬಾರಿ ನೋಟಿಸ್ ನೀಡಿ ಎಚ್ಚರಿಸಲಾಯಿತು. ಆದರೆ ಶೆಡ್ ಮಾಲೀಕರು ಇದಕ್ಕೆ ಸ್ಪಂದಿಸಿದ ಕಾರಣ ಶೆಡ್‌ಗಳನ್ನು ತೆರವುಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಅಕ್ರಮವಾಗಿ ಫುಟ್‌ಪಾತ್ ಒತ್ತುವರಿ ಮಾಡಿಕೊಂಡರೆ ದಂಡ ಹಾಕಲಾಗುವುದು ಎಂದರು.

ನಗರದ ಪ್ರಮುಖ ರಸ್ತೆಗಳಲ್ಲಿರುವ ಬೇಕರಿ, ಬಿರಿಯಾನಿ, ಬಟ್ಟೆ ಅಂಗಡಿ ಮಾಲೀಕರಿಗೆ ತಿಳಿವಳಿಕೆ ನೀಡಿ ಸಾರ್ವಜನಿಕರಿಗೆ ತೊಂದರೆ ನೀಡಬೇಡಿ, ಸಾರ್ವಜನಿಕರು ಫುಟ್‌ಪಾತ್‌ನಲ್ಲಿ ಓಡಾಡಲು ಅನುವು ಮಾಡಿಕೊಡಿ ನಿಮ್ಮ ವ್ಯಾಪಾರ ಕೂಡ ವೃದ್ಧಿಯಾಗಲಿದೆ ಎಂದು ಅಂಗಡಿ ಮಾಲೀಕರಿಗೆ ತಿಳಿವಳಿಕೆ ನೀಡಿದರು.

ಎಇಇ ಮರಿಗೌಡ್ರ, ಪರಿಸರ ಅಭಿಯಂತರ ಮಹೇಶ ಕೊಡಬಾಳ, ಆರೋಗ್ಯ ನಿರೀಕ್ಷಕರಾದ ಮಧುರಾಜ ಕಂಬಳಿ, ಆರ್.ಜಿ.ಬೋವಿ, ರಾಘವೇಂದ್ರ ಗವಾಡೆ, ಶೃತಿ, ಸಿಬ್ಬಂದಿಗಳಾದ ಯಲ್ಲಪ್ಪ, ನಿಂಗಪ್ಪ, ನಾಗಪ್ಪ ಸೇರಿದಂತೆ ಮತ್ತಿತರರು ಇದ್ದರು.

## ಭಾನುವಳ್ಳಿಯಲ್ಲಿ ಇಂದು ಬೃಹತ್ ಉದ್ಯೋಗ ಮೇಳ

ದಾವಣಗೆರೆ, ಫೆ. 8 - ಭೀಮಸಮುದ್ರದ ಜಿ. ಮಲ್ಲಿಕಾರ್ಜುನಪ್ಪ ಮತ್ತು ಶ್ರೀಮತಿ ಹಾಲಮ್ಮ ಚಾರಿಟಿ ಫೌಂಡೇಶನ್ ಹಾಗೂ ಭಾನುವಳ್ಳಿಯ ಸ್ನೇಹ ಸಂಭ್ರಮ ಗೆಳೆಯರ ಬಳಗದ ಸಂಯುಕ್ತಾಶ್ರಯದಲ್ಲಿ, ಜಿಎಂಐಟಿ ತರಬೇತಿ ಮತ್ತು ಉದ್ಯೋಗ ವಿಭಾಗದ ಸಹಯೋಗದೊಂದಿಗೆ, ಹರಿಹರ ತಾಲ್ಲೂಕಿನ ಭಾನುವಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಾಳೆ ದಿನಾಂಕ 9 ರ ಭಾನುವಾರ ಬೃಹತ್ ಉದ್ಯೋಗ ಮೇಳ ನಡೆಯಲಿದೆ.

ಭಾನುವಳ್ಳಿ ಸೇರಿದಂತೆ, ಸುತ್ತಮುತ್ತಲಿನ ಸುಮಾರು 24ಕ್ಕೂ ಹೆಚ್ಚು ಗ್ರಾಮಗಳ 3000ಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ಭಾಗವಹಿಸುವ ನಿರೀಕ್ಷೆ ಇದ್ದು, ಈ ಮೇಳದಲ್ಲಿ ಸುಮಾರು 25ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ. 3665 ಉದ್ಯೋಗಗಳು ಲಭ್ಯವಿವೆ ಎಂದು ಬಳಗದ ಗೌರವಾಧ್ಯಕ್ಷ ಟಿ.ಆರ್. ತೇಜಸ್ವಿ ಕಟ್ಟಿಮನಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ಮೇಳವನ್ನು ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ವೀರೇಶ್ ಹನಗವಾಡಿ ಸೇರಿದಂತೆ ಗಣ್ಯರು ಭಾಗವಹಿಸುವರು. ವಿವರಕ್ಕೆ ಸಂಪರ್ಕಿಸಿ : 9964461461 ಅಥವಾ 9632135886.

ಪತ್ರಿಕಾಗೋಷ್ಠಿಯಲ್ಲಿ ಬಳಗದ ಅಧ್ಯಕ್ಷ ಎಚ್.ಎಮ್. ಶಿವಕುಮಾರ್, ಉಪಾಧ್ಯಕ್ಷ ಇ. ವಿಶ್ವನಾಥ್, ಪ್ರಧಾನ ಕಾರ್ಯದರ್ಶಿ ಡಿ.ಬಿ. ರಾಮನಗೌಡ, ಸಂಘಟನಾ ಕಾರ್ಯದರ್ಶಿ ಆರ್.ಬಿ. ಫಕ್ಕೀರಪ್ಪ, ನಿರ್ದೇಶಕ ಪ್ರಶಾಂತ್ ರೆಡ್ಡಿ, ಮಹಿಳಾ ನಿರ್ದೇಶಕರುಗಳಾದ ಸರಳ, ಮಂಜುಳಾ, ರೂಪ ಇದ್ದರು.

## ಹರಿಹರದಲ್ಲಿ ಇಂದು - ನಾಳೆ ಶ್ರೀ ಮೌನೇಶ್ವರ ಸ್ವಾಮಿ ಜಯಂತ್ಯೋತ್ಸವ



ಶ್ರೀ ಕಾಳಿಕಾಂಬಾ, ಗುರು ಮೌನೇಶ್ವರ ಸೇವಾ ಸಮಿತಿ ಹಾಗೂ ವಿಶ್ವಕರ್ಮ ಸಮಾಜದ ವತಿಯಿಂದ ಇಂದು ಮತ್ತು ನಾಳೆ ಶ್ರೀ ಜಗದ್ಗುರು ಮೌನೇಶ್ವರ ಸ್ವಾಮಿ ಜಯಂತ್ಯೋತ್ಸವ ಸಮಾರಂಭವನ್ನು ಹಳೆ ಭರಂಪುರ ಬಡಾವಣೆಯ ಶ್ರೀ ಮೌನೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಡಿ.ಪಿ. ರಾಜಾಚಾರ್ಯ ತಿಳಿಸಿದ್ದಾರೆ.

ಇಂದು ಅಂತರವಳ್ಳಿ ಶ್ರೀ ಗುರು ನಿರಂಜನ ಸ್ವಾಮಿಗಳು, ಹುಲಗೂರು ಶ್ರೀ ಮೌನೇಶ್ವರ ಸ್ವಾಮಿಗಳವರ ಸಾನ್ನಿಧ್ಯದಲ್ಲಿ ಬೆಳಗ್ಗೆ 6-30ಕ್ಕೆ ಶ್ರೀ ಕಾಳಿಕಾಂಬಾ ದೇವಿ ಮೂರ್ತಿಯನ್ನು ಮೆರವಣಿಗೆಯೊಂದಿಗೆ ಕರೆತರಲಾಗುತ್ತದೆ.

ನಾಳೆ ಸೋಮವಾರ ಬೆಳಿಗ್ಗೆ ಜಿ.ಬಿ. ವೀರೇಶ್ ಆಚಾರ್ಯರವರ ನೇತೃತ್ವದಲ್ಲಿ ಉಪನಯನ, ವಿವಾಹ, ಜವಳ ಹಾಗೂ ಅಕ್ಷತಾರೋಹಣ. ಶ್ರೀ ಗುರು ಮೌನೇಶ್ವರ ಸ್ವಾಮಿಯ ಪಾಲಕಿ ಉತ್ಸವ ನಡೆಯಲಿದೆ. 11-30ಕ್ಕೆ ನಡೆಯಲಿರುವ ಧಾರ್ಮಿಕ ಸಮಾರಂಭದ ಸಾನ್ನಿಧ್ಯವನ್ನು ಅಂತರವಳ್ಳಿ ಶ್ರೀ ಗುರು ನಿರಂಜನ ಮಹಾಸ್ವಾಮಿಗಳು, ಹುಲಗೂರು ಶ್ರೀ ಮೌನೇಶ್ವರ ಮಹಾಸ್ವಾಮಿಗಳು ವಹಿಸಲಿದ್ದಾರೆ. ಸೇವಾ ಸಮಿತಿ ಅಧ್ಯಕ್ಷ ಡಿ.ಪಿ. ರಾಜಾಚಾರ್ಯ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮತ್ತಿತರರು ಆಗಮಿಸುವರು.

## ಮಿಲ್ಕಿಪುರ ಕ್ಷೇತ್ರದಲ್ಲಿ ಬಿಜೆಪಿಗೆ 61 ಸಾವಿರ ಮತಗಳ ಗೆಲುವು

ಅಯೋಧ್ಯೆ,ಫೆ.8 - ಉತ್ತರ ಪ್ರದೇಶದ ಮಿಲ್ಕಿಪುರ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಚಂದ್ರಭಾನು ಪಾಸ್ವಾನ್ ಅವರು 61,710 ಮತಗಳ ಜಯ ಸಾಧಿಸಿದ್ದಾರೆ.

ಪಾಸ್ವಾನ್ ಅವರು 1,46,397 ಮತಗಳನ್ನು ಪಡೆದಿದ್ದಾರೆ. ಅವರ ನಿಕಟ ಎದುರಾಳಿ ಸಮಾಜವಾದಿ ಪಕ್ಷದ ಅಜಿತ್ ಪ್ರಸಾದ್ 84,687 ಮತ ಪಡೆದಿದ್ದಾರೆ.

# ವಾಲ್ಮೀಕಿ ಚರಿತ್ರೆ ಅರ್ಥೈಸಿಕೊಂಡಲ್ಲಿ ಜೀವನ ಸಾರ್ಥಕ

**(1ನೇ ಪುಟದಿಂದ)** ಪರಂಪರೆಯನ್ನು ಎತ್ತಿಹಿಡಿದಿದ್ದಾರೆ. ಮಠದ ಪೀಠಾಧೀಶರು ಸಮಾಜದ ಏಳಿಗೆಗಾಗಿ ಹಗಲಿರುಳೆನ್ನದೇ ಶ್ರಮಿಸುತ್ತಿದ್ದಾರೆ ಎಂದು ಅವರು ಶ್ಲಾಘಿಸಿದರು.

'ಬುಡಕಟ್ಟು ಮಹಿಳೆ ಸಬಲೀಕರಣ' ಮಹಿಳಾ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ದೇವದುರ್ಗ ಶಾಸಕರಾದ ಕರೆಮ್ಮ ಜಿ.ನಾಯಕ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಎಸ್ಸಿ, ಎಸ್ಟಿ ಮಕ್ಕಳಿಗೆ ಶಿಷ್ಯವೇತನ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ. ಸರ್ಕಾರದ ಅನೇಕ ಯೋಜನೆಗಳಿಗೆ ಅನುದಾನ ಸಿಗುತ್ತಿಲ್ಲ. ರಾಜ್ಯ ಸಮಗ್ರ ಅಭಿವೃದ್ಧಿ ಹಿತದೃಷ್ಟಿಯಿಂದ ಕುಟುಂಬ ರಾಜಕಾರಣಕ್ಕೆ ಇತಿಶ್ರೀ ಹಾಡಲು ಮುಂದಾದಲ್ಲಿ ಒಳಿತೆಂದು ಅಭಿಪ್ರಾಯಪಟ್ಟ, ಕರೆಮ್ಮ ನಮ್ಮ ಸಮಾಜದವರೇಕೆ ಮುಖ್ಯಮಂತ್ರಿಗಳಾಗಬಾರದೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ತುಮಕೂರು ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷರಾದ ಶಾಂತಲಾ ರಾಜಣ್ಣ ಮಾತನಾಡಿ, ವಾಲ್ಮೀಕಿ ಸಮಾಜದ ಮಹಿಳೆಯರು ತಮ್ಮ ಕಷ್ಟ ಕಾರ್ಪಣ್ಯಗಳು ಏನೇ ಇದ್ದರೂ ಅವುಗಳನ್ನು ಬದಿಗೊತ್ತಿ, ತಮ್ಮ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೊಡಿಸಿದಲ್ಲಿ ಮಾತ್ರ ಅಭಿವೃದ್ಧಿ ಸಾಧ್ಯ. ವಿವಿಧ ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡಿರುವ ನಮ್ಮ ಸಮಾಜದ ಮುಖಂಡರು ವೈಷಮ್ಯವನ್ನು ಬಿಟ್ಟು ಸಮಾಜದ ಒಳಿತಿಗಾಗಿ ಒಗ್ಗಟ್ಟಿನಿಂದಿದ್ದರೆ ಸಮಾಜದ ಅಭಿವೃದ್ಧಿ ಸಾಧ್ಯವೆಂದರು.

ಚಿಕ್ಕೋಡಿ ಸಂಸದರಾದ ಕು. ಪ್ರಿಯಾಂಕ ಜಾರಕಿಹೊಳಿ ಮಾತನಾಡಿ, 21ನೇ ಶತಮಾನವನ್ನು ದಾಟಿ 22ನೇ ಶತಮಾನಕ್ಕೆ ಕಾಲಿಡುತ್ತಿದ್ದರೂ ಸಹ ಇಂದಿಗೂ ನಾಡಿನಲ್ಲಿ ಅಸ್ಪೃಶ್ಯತೆ ತಾಂಡವವಾಡುತ್ತಿದೆ. ಅದನ್ನು ಹೊಡೆದೋಡಿಸಲು ಮಹಿಳೆಯರು ಉತ್ತಮ ಶಿಕ್ಷಣ ಪಡೆಯುವುದರೊಂದಿಗೆ ಸಮಾನತೆಯಿಂದ ಬದುಕಿದಲ್ಲಿ ಅಸ್ಪೃಶ್ಯತೆ ಹೊಡೆದೋಡಿಸಲು ಸಾಧ್ಯವೆಂದರು.

ಉಪನ್ಯಾಸ ನೀಡಿದ ಮೈಸೂರಿನ ಸಾಹಿತಿ ಡಾ. ಅನಸೂಯ ಕೆಂಪನಹಳ್ಳಿ ಮಾತನಾಡಿ, ಸಾವಿತ್ರಿ ಬಾಪುಲೆ, ಡಾ. ಅಂಬೇಡ್ಕರ್, ಪಾತಿಮಾ ಶೇಖ್ ಅವರು ಮಹಿಳೆಯರ ಸಮಾನತೆಗಾಗಿ ಹೋರಾಡಿದವರಾಗಿದ್ದು, ಅವರ ಹೋರಾಟಗಳ ಕುರಿತು ಮಹಿಳೆಯರು ಮಾಹಿತಿ ಅರಿಯಬೇಕು. ಮಹಿಳೆಯರು ರಾಜಕೀಯದಲ್ಲಿ ಬೆರಳೆಣಿಕೆಯಷ್ಟಿದ್ದಾರೆ. ದೇಶದಲ್ಲಿ ಈವರೆಗೆ 17 ಜನ ಮಹಿಳಾ ಮುಖ್ಯ ಮಂತ್ರಿಗಳಾಗಿದ್ದಾರೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಇದುವರೆಗೂ ಆ ಭಾಗ್ಯವೇಕೆ ಕೂಡಿ ಬಂದಿಲ್ಲವೆಂದು ಆತಂಕ ವ್ಯಕ್ತಪಡಿಸಿದರು.

ಸಂಡೂರು ಶಾಸಕರಾದ ಅನ್ನಪೂರ್ಣ ಈ ತುಕಾರಾಂ ಕಾರ್ಯಕ್ರಮ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಅವರು ಶಬರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಡಾ. ವಾಲ್ಮೀಕಿ ಪ್ರಸನ್ನಾನಂದ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಜಾತ್ರಾ ಸಮಿತಿಯ ಅಧ್ಯಕ್ಷ - ಜಗಳೂರಿನ ಶಾಸಕ ಬಿ.ದೇವೇಂದ್ರಪ್ಪ, ಸಂಚಾಲಕ ಶ್ರೀನಿವಾಸ್ ದಾಸಕರಿಯಪ್ಪ, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಮೇಯರ್ ಚಮನ್ ಸಾಬ್, ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಬಿ.ಎಂ.ವಾಗೀಶ್ ಸ್ವಾಮಿ, ಕುಕ್ಕುವಾಡ ಮಂಜುನಾಥ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕರಾದ ಕವಿತಾ ವಾರಂಗಲ್, ಹರಿಹರ ನಗರ ಸಭೆಯ ಅಧ್ಯಕ್ಷರಾದ ಕವಿತಾ ಮಾರುತಿ ಬೇಡರ್, ಧರ್ಮದರ್ಶಿ ಕೆ.ಬಿ. ಮಂಜುನಾಥ, ಬಿ.ವೀರಣ್ಣ, ಡಿ.ಆರ್.ವಾಲ್ಮೀಕಿ, ನಾಗರಾಜಪ್ಪ ಹಳ್ಳಳ್ಳಪ್ಪನವರ, ಚಂದ್ರಪ್ಪ ಬೇಡರ, ಡಿ.ಬಿ. ಬಸವರಾಜಪ್ಪ, ಗದಗಿನ ಅಬಕಾರಿ ಉಪ ಆಯುಕ್ತರಾದ ಲಕ್ಷ್ಮಿ ಮಾರುತಿ ತೋಟಗಂಟಿ, ಕೋಲಾರದ ಸಹಾಯಕ ಕಮಿಷನರ್ ಡಾ. ಎಚ್. ಪಿ.ಎಸ್ ಮೈತ್ರಿ, ಡಾ. ಶೋಭಾ, ಶಿವಮೊಗ್ಗ ತಾಲ್ಲೂಕು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಸವಿತಾ ಸಂಜಯ್, ವಿಜಯಶ್ರೀ ಮಹೇಂದ್ರಕುಮಾರ್, ಪಾರ್ವತಿ ಬೋರಯ್ಯ, ಗೌರಮ್ಮ ಮಂಜುನಾಥ್, ರಾಜನಹಳ್ಳಿ ಗ್ರಾ.ಪಂ ಅಧ್ಯಕ್ಷೆ ಹೇಮಾವತಿ ಪರಶುರಾಮಪ್ಪ, ಉಪಾಧ್ಯಕ್ಷ ಎ.ಕೆ.ನಾಗೇಂದ್ರಪ್ಪ ಹಾಗೂ ಸದಸ್ಯರುಗಳು ಭಾಗವಹಿಸಿದ್ದರು.

# ಸಾರ್ವಜನಿಕ ಮರುಪ್ರಕಟಣೆ

ದಿನಾಂಕ: 4-1-2025 ರಂದು 'ಜನತಾವಾಣಿ' ದಿನಪತ್ರಿಕೆಯಲ್ಲಿ ಶ್ರೀಮತಿ ಇಶ್ರತ್ ಬಾನು ಹೆಚ್.ಎನ್. ವಕೀಲರು ತಮ್ಮ ಕಕ್ಷಿಗಾರರಾದ ಶ್ರೀ ವಿ.ಎಸ್. ಜಯಪ್ರಕಾಶ್ ಬಿನ್ ಶ್ರೀ ವಿ.ಎಸ್. ಶಿವಾನಂದಪ್ಪ ಮತ್ತು ವಿ.ಎಸ್. ಚಂದ್ರಶೇಖರ್ ಬಿನ್ ಶ್ರೀ ವಿ.ಎಸ್. ಶಿವಾನಂದಪ್ಪ, ವಡ್ಡಿನಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು ಹಾಗು ಜಿಲ್ಲೆ ಇವರ ಪರವಾಗಿ ನೀಡಿದ ಸಾರ್ವಜನಿಕ ಪ್ರಕಟಣೆಗೆ ನನ್ನ ಕಕ್ಷಿಗಾರರಾದ ಶ್ರೀ ಬಿ.ಜಿ. ಅಜಯ್‌ಕುಮಾರ್ ಬಿನ್ ಲೇಟ್ ಶ್ರೀ ಜಯಣ್ಣ, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ, ಇವರ ಪರವಾಗಿ ಈ ಸಾರ್ವಜನಿಕ ಮರುಪ್ರಕಟಣೆ ನೀಡಲಾಗಿದೆ.

ಮೊದಲನೆಯದಾಗಿ, ಸದರಿ ಪ್ರಕಟಣೆಯಲ್ಲಿ ಶ್ರೀಮತಿ ಇಶ್ರತ್ ಬಾನು ಹೆಚ್.ಎನ್. ವಕೀಲರು ತಿಳಿಸಿರುವಂತೆ, ಮೇಲ್ಕಂಡ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ವಿ.ಎಸ್. ಚಂದ್ರಶೇಖರ್ ಮತ್ತು ಇವರೊಡನೆ ಪ್ರಕಟಣೆಯ ಅನುಸೂಚಿ ಆಸ್ತಿಗಳಿಗೆ ಸಂಬಂಧಿಸಿದಂತೆ ದಿನಾಂಕ: 14-10-2020ರಂದು ನನ್ನ ಕಕ್ಷಿಗಾರರಾದ ಶ್ರೀ ಬಿ.ಜಿ. ಅಜಯ್‌ಕುಮಾರ್ ಬಿನ್ ಲೇಟ್ ಶ್ರೀ ಜಯಣ್ಣ ಇವರು, ಜಂಟಿ ಅಭಿವೃದ್ಧಿ ಕರಾರನ್ನು ಮಾಡಿಕೊಂಡಿರುತ್ತಾರೆ. ಹಾಗೂ ಅದಾದ ಮೇಲೆ ಭೂಪರಿವರ್ತನೆ ಮಾಡಿಸಿ ನಿವೇಶನಗಳ ಅಭಿವೃದ್ಧಿ ಮಾಡುತ್ತೇನೆ ಎಂದು ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ ಎನ್ನುವುದು ಭಾಗಶಃ ಸರಿ. ಆದರೆ ಸದರಿ ಪ್ರಕಟಣೆಯಲ್ಲಿ ತಿಳಿಸಿರುವಂತೆ ಸದರಿಯವರು ನಿವೇಶನಗಳ ಅಭಿವೃದ್ಧಿ ಮಾಡದೇ ದಿನಗಳನ್ನು ತಳ್ಳಿದ್ದರಿಂದ ಸದರಿ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ರದ್ದುಪಡಿಸಿದ ಬಗ್ಗೆ ದಿನಾಂಕ: 28-11-2024 ರಂದು ನೋಟೀಸನ್ನು ನೀಡಿರುತ್ತಾರೆ ಎನ್ನುವುದು ತಪ್ಪು ಹಾಗೂ ಕಾನೂನುಬಾಹಿರ ಕೂಡ ಆಗಿದ್ದು ನನ್ನ ಕಕ್ಷಿಗಾರರನ್ನು ಪ್ರತಿಬಂಧಿಸುವುದಿಲ್ಲ ಮತ್ತು ಅದೇ ರೀತಿ ಸದರಿ ಪ್ರಕಟಣೆಯಲ್ಲಿ ತಿಳಿಸಿರುವಂತೆ ಸದರಿ ಕರಾರು ಪತ್ರವನ್ನು ರದ್ದುಪಡಿಸಲು ಸದರಿ ಶ್ರೀ ವಿ.ಎಸ್. ಜಯಪ್ರಕಾಶ್ ಮತ್ತು ವಿ.ಎಸ್. ಚಂದ್ರಶೇಖರ್ ಇವರಿಗೆ ಯಾವುದೇ ಅಧಿಕಾರವಿರುವುದಿಲ್ಲ. ಅದರಲ್ಲೂ ಸದರಿ ಪ್ರಕರಣದ ವಾಸ್ತವ ವಿಷಯಗಳಿಗೆ ಸಂಬಂಧಿಸಿದಂತೆ ಅವರಿಗೆ ಆ ರೀತಿಯ ಅಧಿಕಾರ ಇರುವುದಿಲ್ಲವೆಂದು ನನ್ನ ಕಕ್ಷಿಗಾರರು ಈ ಹಿಂದೆ ದಿ: 19-12-2024 ರಂದು ನೀಡಿಸಿದ ಪ್ರತ್ಯುತ್ತರ ನೋಟೀಸಿನಲ್ಲಿ ಸವಿವರವಾಗಿ ತಿಳಿಸಿರುತ್ತಾರೆ.

ಸದರಿ ಪ್ರಕಟಣೆಯಲ್ಲಿ ಶ್ರೀಮತಿ ಇಶ್ರತ್ ಬಾನು ಅವರು ತಿಳಿಸಿರುವಂತೆ ನನ್ನ ಕಕ್ಷಿಗಾರರಾದ ಶ್ರೀ ಅಜಯ್ ಕುಮಾರ್‌ರವರು ಮೌಖಿಕವಾಗಿ ಸದರಿ ಕರಾರು ಪತ್ರ ಆದ ನಂತರ ಯಾವುದೇ ನೋಂದಾಯಿತ ಪತ್ರ ಮಾಡುವುದು ಬೇಡ, ತನ್ನ ಅಧಿಕಾರವನ್ನು ಬಳಸಿ ಈ ಪತ್ರದ ಮೇಲೇನೇ ನಿವೇಶನಗಳ ಅಭಿವೃದ್ಧಿ ಮಾಡುತ್ತೇನೆ ಎಂದು ತಿಳಿಸಿದ್ದರಿಂದ ಅವರ ಕಕ್ಷಿಗಾರರು ಹಲವಾರು ಸಲ ಕೇಳಿಕೊಂಡಾಗ್ಯೂ ಸಹ ನನ್ನ ಕಕ್ಷಿಗಾರರು ಯಾವುದೇ ರೀತಿ ಸ್ಪಂದಿಸಿರುವುದಿಲ್ಲ, ಆದ್ದರಿಂದ ಈಗಾಗಲೇ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ರದ್ದುಪಡಿಸಿದ್ದರ ಬಗ್ಗೆ ಲೀಗಲ್ ನೋಟೀಸ್ ನೀಡಿದ್ದು, ಸಾರ್ವಜನಿಕರು ಸದರಿಯವರ ಜೊತೆಗೆ ರೆವಿನ್ಯೂ ನಿವೇಶನಗಳು ಅಂತ ಅಥವಾ ಡೋರ್ ನಂಬರ್ ಮತ್ತು ಅಲಿನೇಶನ್ ಆಗಿದೆ ಅಂತ ಮಾರಾಟ ವಗೈರೆ ವ್ಯವಹಾರ ಮಾಡಬಾರದು. ಒಂದು ವೇಳೆ ಆ ರೀತಿ ಬಿ.ಜೆ. ಅಜಯ್ ಕುಮಾರ್ ಬಿನ್: ಲೇಟ್ ಜಯ್ಯಣ್ಣ ಇವರೊಡನೆ ಕ್ರಯ ವ್ಯವಹಾರ ಮಾಡಿದರೆ, ಅವರ ಕಕ್ಷಿದಾರರು ಜವಾಬ್ದಾರರಾಗಿರುವುದಿಲ್ಲ, ಒಂದು ವೇಳೆ ಪರಭಾರೆ ವ್ಯವಹಾರ ಮಾಡಿದರೆ, ಸಾರ್ವಜನಿಕರೇ ಜವಾಬ್ದಾರರು ಅಂತ ನೀಡಿರುವ ಸಾರ್ವಜನಿಕ ಪ್ರಕಟಣೆ ವಾಸ್ತವಾಂಶಗಳಿಗೆ ವಿರುದ್ಧವಾಗಿದ್ದು, ಕಾನೂನುಬಾಹಿರವಾಗಿದ್ದು ಕಾನೂನು ಸಮ್ಮತವಾಗಿರುವುದಿಲ್ಲ ಮತ್ತು ಇದು ಕೇವಲ ನನ್ನ ಕಕ್ಷಿಗಾರರಿಗೆ ಅನ್ಯಾಯ, ಮೋಸ, ಕಾನೂನುಬಾಹಿರ ನಷ್ಟ ಮತ್ತು ಅನಾನುಕೂಲ ಮಾಡುವ ಹಾಗೂ ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಇವರು ಅಕ್ರಮ ಲಾಭ ಮಾಡಿಕೊಳ್ಳುವ ಮತ್ತು ನನ್ನ ಕಕ್ಷಿಗಾರರಾದ ಶ್ರೀ ಬಿ.ಜಿ.ಅಜಯಕುಮಾರ್ ಇವರಿಗೆ ಅನ್ವಯಿಸಿದಂತೆ ಕಾನೂನು ರೀತ್ಯಾ ತಮ್ಮ ಜವಾಬ್ದಾರಿ ಮತ್ತು ಉತ್ತರದಾಯಿತ್ವವನ್ನು ತಪ್ಪಿಸಿಕೊಳ್ಳುವ ದುರುದ್ದೇಶದಿಂದ ನೀಡಿದ ಪ್ರಕಟಣೆಯಾಗಿದ್ದು, ಸಾರ್ವಜನಿಕರು ಯಾರೂ ಈ ಬಗ್ಗೆ ಗಮನ ಕೊಡಬಾರದೆಂದು, ಹಾಗೂ ಮೋಸ ಹೋಗಬಾರದೆಂದು ಮತ್ತು ಈ ಬಗ್ಗೆ ನನ್ನ ಕಕ್ಷಿಗಾರರ ಪರವಾಗಿ ಈ ಕೆಳಕಂಡ ಸ್ಪಷ್ಟೀಕರಣ ನೀಡುವ ಉದ್ದೇಶದಿಂದ ಈ ಮರು ಪ್ರಕಟಣೆಯನ್ನು ನೀಡಲಾಗಿದೆ.

**01.** **ನನ್ನ ಕಕ್ಷಿಗಾರರು ಈ ಹಿಂದೆ ದಿನಾಂಕ: 19-12-2024 ರಂದು ನನ್ನ ಮೂಲಕ ಸದರಿ ಶ್ರೀಮತಿ ಇಶ್ರತ್ ಬಾನು ಹಾಗೂ ಅವರ ಕಕ್ಷಿಗಾರರುಗಳಿಗೆ ನೀಡಿದ ಪ್ರತ್ಯುತ್ತರದ ನೋಟೀಸಿನ ಎಲ್ಲ ಅಂಶಗಳನ್ನು ಪುನರುಚ್ಚರಿಸುತ್ತಾರೆ;**

**02.** **ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಇವರು ದಿನಾಂಕ: 14-10-2020 ರಂದು ನನ್ನ ಕಕ್ಷಿಗಾರರಿಗೆ ಮೇಲ್ಕಂಡ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಬರೆದುಕೊಟ್ಟು ಆ ದಿನ ರೂ.25,00,000-00 ರೂಪಾಯಿಗಳನ್ನು ಮುಂಗಡವಾಗಿ ಪಡೆದುಕೊಂಡು ನಂತರ ದಿನಾಂಕ: 3-12-2020 ರಂದು ಮೇಲೆ ಹೇಳಿದ ದಿನಾಂಕ: 14-10-2020ರ ಜಂಟಿ ಅಭಿವೃದ್ಧಿ ಕರಾರಿನ ಬಗ್ಗೆ ಒಪ್ಪಿ ಆ ದಿನ ಪುನಃ ರೂ.10,00,000-00 ಗಳನ್ನು ಮುಂಗಡವಾಗಿ ಪಡೆದುಕೊಂಡು ದಿನಾಂಕ: 3-10-2020ರ ಕರಾರಿನಲ್ಲಿ ಒಂದು ಷರಾ ಬರೆದುಕೊಟ್ಟಿರುತ್ತಾರೆ. ಇದಾದ ಮೇಲೆ ಪುನಃ ಸದರಿ ಶ್ರೀಮತಿ ಇಶ್ರತ್‌ಬಾನು ಇವರ ಕಕ್ಷಿಗಾರರು ನನ್ನ ಕಕ್ಷಿಗಾರರಿಂದ ದಿನಾಂಕ: 22-3-2021ರಂದು ರೂ. 5,00,000-00 ಗಳನ್ನು ಮುಂಗಡವಾಗಿ ಪಡೆದು ಷರಾ ಬರೆದುಕೊಟ್ಟಿರುತ್ತಾರೆ. ಹೀಗೆ ಅವರು ನನ್ನ ಕಕ್ಷಿಗಾರರಿಂದ ಒಟ್ಟು ರೂ. 40,00,000-00 ಗಳನ್ನು ಮುಂಗಡವಾಗಿ ಪಡೆದುಕೊಂಡಿರುತ್ತಾರೆ.**

**03.** **ಜೊತೆಗೆ ಈ ಬಗ್ಗೆ ನೋಂದಾಯಿತ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಡುವ ಜವಾಬ್ದಾರಿ ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಇವರುಗಳದ್ದಾಗಿದ್ದರೂ ಸಹ ನನ್ನ ಕಕ್ಷಿಗಾರರಿಗೆ ಸದರಿ ಜಮೀನುಗಳ ಉಪಯೋಗದ ಬದಲಾವಣೆ ಮಾಡಿಸಿ. ಅನ್ಯ ಕ್ರಾಂತಗೊಳಿಸಿ, ಬಡಾವಣೆ ನಿರ್ಮಿಸಿ, ನಿವೇಶನಗಳನ್ನು ವಿಂಗಡಿಸಿ ತಯಾರಿಸುವ ಕೆಲಸಕ್ಕೆ ಪೂರ್ವಭಾವಿಯಾಗಿ ಬೇಕಾದ ಎಲ್ಲಾ ಕೆಲಸಗಳನ್ನು ಮಾಡಲು ಅನುಮತಿ ನೀಡಿ ಆ ಪ್ರಕಾರ ನನ್ನ ಕಕ್ಷಿಗಾರರು ಸದರಿ ಜಮೀನುಗಳ ಉಪಯೋಗ ಬದಲಾವಣೆಗೆ ಬೇಕಾದ ಎಲ್ಲಾ ಕೆಲಸಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರಲ್ಲಿ ಮಾಡಿಸಿ ಷೆಡ್ಯೂಲ್ ಜಮೀನುಗಳು ಆಗ್ಗೆ ಸಮತಟ್ಟು ಇಲ್ಲದ ಕಾರಣ ಸಾಕಷ್ಟು ಹಣ ಖರ್ಚು ಮಾಡಿ ಸಿದ್ದವಿಟ್ಟಾಗ ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಇವರು ಮುಂದಿನ ಕಾರ್ಯಗಳಿಗೆ ಅನುವಾಗುವಂತೆ ಬೇಕಾದ ದಾಖಲೆಗಳನ್ನು ಮಾಡಿಕೊಡಲು ನನ್ನ ಕಕ್ಷಿಗಾರರು ಹಲವಾರು ಬಾರಿ ಅವರನ್ನು ಕೋರಿದರೂ ಸಹ, ಅವರು ಮುಂದೆ ಬಂದಿರುವುದಿಲ್ಲ. ಹೀಗಾಗಿ ನನ್ನ ಕಕ್ಷಿಗಾರರು ಹಾಗೂ ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಇವರ ನಡುವೆ ಆದ ದಿ: 14-10-2020 ರ ಜಂಟಿ ಅಭಿವೃದ್ಧಿ ಕರಾರು ಪತ್ರ ಹಾಗೂ ದಿನಾಂಕ: 3-12-2020 ರಲ್ಲಿ ಆದ ಜಂಟಿ ಅಭಿವೃದ್ಧಿ ಕರಾರು ಪತ್ರದ ಪ್ರಕಾರ ನನ್ನ ಕಕ್ಷಿಗಾರರು ತಮ್ಮ ಭಾಗದ ಜವಾಬ್ದಾರಿಯನ್ನು ನಿರ್ವಹಿಸಲು ಅಂದೂ, ಇಂದೂ, ಎಂದೂ ಎಲ್ಲಾ ರೀತಿಯಿಂದಲೂ ತಯಾರು ಹಾಗೂ ಸಿದ್ದರಿದ್ದರೂ ಸಹ, ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಇವರುಗಳೇ ತಮ್ಮ ಜಂಟಿ ಅಭಿವೃದ್ಧಿ ಕರಾರು ಪತ್ರಗಳ ಪ್ರಕಾರ ತಮ್ಮ ಭಾಗದ ಜವಾಬ್ದಾರಿಯನ್ನು ನಿರ್ವಹಿಸಲು ತಯಾರು ಹಾಗೂ ಸಿದ್ದರಿಲ್ಲದೇ ಇರುವ ಕಾರಣ, ಅವರೇ ಕರಾರಿನ ಪ್ರಕಾರ ನಡೆದುಕೊಳ್ಳದೇ ತಪ್ಪಿತಸ್ಥರಾಗಿ ನನ್ನ ಕಕ್ಷಿಗಾರರಿಗೆ ಈ ಬಗ್ಗೆ ಜವಾಬ್ದಾರರಾಗಿರುತ್ತಾರೆ.**

**04.** **ಮೇಲೆ ಹೇಳಿದಂತೆ ದಿ: 14-10-2020 ರಂದು ಮತ್ತು ದಿನಾಂಕ: 3-12-2020 ರಂದು ಜಂಟಿ ಅಭಿವೃದ್ಧಿ ಕರಾರು ಪತ್ರಗಳನ್ನು ಮಾಡಿಕೊಂಡ ನಂತರ ಅವರುಗಳ ಕುಟುಂಬಗಳಲ್ಲಿ ಮೇಲ್ಕಂಡ (ಷೆಡ್ಯೂಲ್) ಆಸ್ತಿಗಳ ಖಾತೆ ವಗೈರೆ ಮಾಡಿಸಿಕೊಂಡು ನೋಂದಾಯಿತ ಜಂಟಿ ಅಭಿವೃದ್ಧಿ ಕರಾರು ಪತ್ರ ಮಾಡಿಕೊಡಲು ಮತ್ತು ಆ ಪ್ರಕಾರ ಹಾಗೂ ಒಪ್ಪಿದ ಪ್ರಕಾರ ನಡೆದುಕೊಳ್ಳಲು ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಇವರುಗಳು ಮುಂದೆ ಬಾರದೇ ತಮಗಿದ್ದ ಅನಾನುಕೂಲಗಳನ್ನು ತಿಳಿಸುತ್ತಾ, ಮುಂದೆ ನೋಂದಾಯಿತ ಜಂಟಿ ಅಭಿವೃದ್ಧಿ ಕರಾರು ಮಾಡಿಕೊಡುತ್ತೇವೆ, ಈ ಮಧ್ಯೆ ನೀವು ಪ್ರಶ್ನಿತ ಜಮೀನುಗಳ ಬಗೆಗಿನ ಉಪಯೋಗದ ಕುರಿತು ಅಂದರೆ ಹಸಿರು ವಲಯದಲ್ಲಿದ್ದುದ್ದನ್ನು ವಸತಿ ಉದ್ದೇಶಕ್ಕಾಗಿ ಬದಲಾಯಿಸಲು ಹಾಗೂ ಸದರಿ ಜಮೀನುಗಳನ್ನು ಸಮತಟ್ಟು ಮಾಡಿಸಲು ಅನುವಾಗಿ ಎಂದು ನನ್ನ ಕಕ್ಷಿಗಾರರಿಗೆ ತಿಳಿಸಿ ಒಪ್ಪಿದ ಪ್ರಕಾರ ನನ್ನ ಕಕ್ಷಿಗಾರರು ಉದ್ಯುಕ್ತರಾಗಿ ಈ ಬಗ್ಗೆ ಸದರಿ ಜಮೀನುಗಳ ಉಪಯೋಗದ ಬದಲಾವಣೆ ಕುರಿತು ಹಾಗೂ ಸಮತಟ್ಟು ಮಾಡುವ ಕೆಲಸವನ್ನು ಸುಮಾರು ರೂಪಾಯಿ 60 ಲಕ್ಷಕ್ಕಿಂತಲೂ ಹೆಚ್ಚು ಖರ್ಚು ಮಾಡಿ ಉಪಯೋಗದ ಬದಲಾವಣೆ ಮಾಡಿಸಿ ಮತ್ತು ಜಮೀನುಗಳನ್ನು ಸಮತಟ್ಟು ಮಾಡಿಸಿ ನಂತರ ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಅವರನ್ನು ನೋಂದಾಯಿತ ಜಂಟಿ ಅಭಿವೃದ್ಧಿ ಕರಾರು ಮಾಡಿಕೊಡಲು ಹಾಗೂ ಬಡಾವಣೆ ನಿರ್ಮಿಸಿ, ನಿವೇಶನಗಳನ್ನು ವಿಂಗಡಿಸಿ ಡೋರ್ ನಂಬರುಗಳನ್ನು ಪಡೆದುಕೊಂಡು ಲೇಔಟ್ ಮಾಡಲು ಕರೆದಾಗ ಈಗ ನಾಳೆ ಎಂದು ವಿನಾಕಾರಣ ಮುಂದೂಡುತ್ತಾ ಬಂದಿರುತ್ತಾರೆ. ನನ್ನ ಕಕ್ಷಿಗಾರರು ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಇವರುಗಳನ್ನು ಈ ಬಗ್ಗೆ ಒತ್ತಾಯಿಸಿದಾಗ ನಂತರದಲ್ಲಿ ಮೇಲೆ ಹೇಳಿದಂತೆ ಸದರಿಯವರು ತಮ್ಮ ವಕೀಲರಾದ ಶ್ರೀಮತಿ ಇಶ್ರತ್‌ಬಾನು ಇವರ ಮೂಲಕ ಜನತಾವಾಣಿ ಪತ್ರಿಕೆಯಲ್ಲಿ ದಿ: 28-11-2024 ರ ಸುಳ್ಳು ಮತ್ತು ಕಾನೂನುಬಾಹಿರ ನೋಟೀಸು ನೀಡಿಸಿದ್ದನ್ನು ನನ್ನ ಕಕ್ಷಿಗಾರರು ಸೂಕ್ತವಾಗಿ ದಿ: 19-12-2024 ರಂದು ಜನತಾವಾಣಿ ಪತ್ರಿಕೆಯಲ್ಲಿ ಪ್ರತ್ಯುತ್ತರ ನೋಟೀಸನ್ನು ನೀಡಿಸಿರುತ್ತಾರೆ.**

**05.** **ನಂತರದಲ್ಲಿ ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಇವರು ಕೇವಲ ನನ್ನ ಕಕ್ಷಿಗಾರರಿಗೆ ಮೋಸ ಮಾಡಲು, ಅಕ್ರಮ ಲಾಭ ಮಾಡಿಕೊಳ್ಳಲು ಹಾಗೂ ತಮ್ಮ ಕರಾರು ಪತ್ರದ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಈ ರೀತಿ ಸುಳ್ಳು ಪ್ರಕಟಣೆ ನೀಡಿದ್ದು ಸಾರ್ವಜನಿಕರು ಯಾರೂ ಈ ಬಗ್ಗೆ ಮೋಸ ಹೋಗಬಾರದೆಂದು ಹಾಗೂ ಸದರಿ ಶ್ರೀ ವಿ.ಎಸ್.ಜಯಪ್ರಕಾಶ್ ಮತ್ತು ಶ್ರೀ ವಿ.ಎಸ್. ಚಂದ್ರಶೇಖರ್ ಇವರ ಪರವಾಗಿ ದಿನಾಂಕ: 4-1-2025 ರ ಜನತಾವಾಣಿ ದಿನಪತ್ರಿಕೆಯಲ್ಲಿನ ಪ್ರಕಟಣೆಯಲ್ಲಿನ ಯಾವುದೇ ವಿಷಯಗಳನ್ನು ನಂಬಬಾರದೆಂದು ಮತ್ತು ಮೇಲ್ಕಂಡ ಕಾರಣಗಳಿಗಾಗಿ ಸದರಿ ಪ್ರಕಟಣೆಯಲ್ಲಿನ ಅನುಸೂಚಿ ಆಸ್ತಿಗಳ ಮೇಲೆ ನನ್ನ ಕಕ್ಷಿಗಾರರಿಗೆ ಇರತಕ್ಕ ಹಕ್ಕುಗಳನ್ನು ಸೂಕ್ತ ರೀತಿಯಿಂದ ಚಲಾಯಿಸುವ ಮತ್ತು ಕಾನೂನು ಕ್ರಮ ಕೈಗೊಳ್ಳುವ ಹಕ್ಕು ಉಳಿಸಿಕೊಂಡು ಸಾರ್ವಜನಿಕರು ಯಾರೂ ಈ ಬಗ್ಗೆ ಮೋಸ ಹೋಗಬಾರದೆಂದು ಈ ಮೂಲಕ ತಿಳಿಸಲಾಗಿದೆ.**

**ದಾವಣಗೆರೆ**
**ದಿನಾಂಕ : 29-01-2025**

**ಮಲ್ಲಿಕಾರ್ಜುನ ಕಣವಿ,** ಬಿ.ಎ. ಎಲ್‌ಎಲ್.ಎಂ.
**ವಕೀಲರು, ನಂ.5 & 6, 1ನೇ ಅಂತಸ್ತು,**
**ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್,**
**ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-577006,**

# 66 ವರ್ಷಗಳ ನಂತರ ಜಮೀನು ವಿವಾದ ಇತ್ಯರ್ಥಪಡಿಸಿದ ಕೋರ್ಟ್

## ಪ್ರಕರಣ ಈಗಿನ ಸ್ಥಿತಿಯಲ್ಲಿ ಅರ್ಥ ಕಳೆದುಕೊಂಡಿದೆ ಎಂದು ತೀರ್ಪು

ನವದೆಹಲಿ, ಫೆ. 8 - ಜಮೀನು ವಿವಾದ ಒಂದು ದಾಖಲಾದ 66 ವರ್ಷಗಳ ನಂತರ ದೆಹಲಿ ನ್ಯಾಯಾಲಯ ಪ್ರಕರಣ ಇತ್ಯರ್ಥಪಡಿಸಿದೆ. ಪ್ರಕರಣದ ಮೂಲ ಖಟ್ಲೆದಾರರು ನಿಧನರಾಗಿ ಸಾಕಷ್ಟು ವರ್ಷಗಳು ಉರುಳಿರುವ ಕಾರಣ ಈಗಿನ ಪರಿಸ್ಥಿತಿಯಲ್ಲಿ ಪ್ರಕರಣ ನಿರ್ಧರಿಸಲಾಗದು ಎಂದು ನ್ಯಾಯಾಲಯ ಹೇಳಿದೆ. 1959ರಲ್ಲಿ ಮೋಹನ್ ಲಾಲ್ ಎಂಬುವವರು ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿ, ಡೆವಲಪರ್‌ಗಳು ತಮ್ಮ ಅನುಮತಿ ಇಲ್ಲದೆ ತಮ್ಮ ಜಾಗದಲ್ಲಿ ಬಡಾವಣೆ ನಿರ್ಮಿಸುತ್ತಿದ್ದಾರೆ ಎಂದು ದೂರಿದ್ದರು.

ಈ ಬಗ್ಗೆ ತೀರ್ಪು ನೀಡಿರುವ ಸಿವಿಲ್ ನ್ಯಾಯಮೂರ್ತಿ ಕಪಿಲ್ ಗುಪ್ತ, ಅರ್ಜಿದಾರರು ಜಮೀನಿನ ವಶ ಹೊಂದಿಲ್ಲ. ಅವರು ಕೇವಲ ತಡೆಯಾಜ್ಞೆ ಕೋರಿದ್ದರು ಎಂದಿದ್ದಾರೆ.

ವಕೀಲ ಅಮಿತ್ ಕುಮಾರ್ ಅವರು ಎದುರುದಾರರ ಪರವಾಗಿ ವಾದ ಮಂಡಿಸಿ, ಈಗಾಗಲೇ ಬಡಾವಣೆ ನಿರ್ಮಿಸಲಾಗಿದೆ. ಹೀಗಾಗಿ ಡೆವಲಪರ್ ತಡೆಯಬೇಕು ಎಂಬ ಅರ್ಜಿ ಅರ್ಥ ಕಳೆದುಕೊಂಡಿದೆ ಎಂದರು.

ಭೋಟೆ ಲಾಲ್ ಹಾಗೂ ಇತರರು ಬಡಾವಣೆ ನಿರ್ಮಿಸುವ ಸಲುವಾಗಿ ದೆಹಲಿ ಅಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ಪಡೆದಿದ್ದರು. ಅದರಂತೆ ಮಾನಸ ಸರೋವರ ಗಾರ್ಡನ್ ಕಾಲೋನಿ ನಿರ್ಮಿಸಲು ಮುಂದಾಗಿದ್ದರು. ಇದರಲ್ಲಿ ತಮ್ಮ ಜಮೀನೂ ಸಹ ಸೇರಿದೆ ಎಂದು ಮೋಹನ್ ಲಾಲ್ ಆಕ್ಷೇಪಿಸಿದ್ದರು. ಆದರೆ, ಅವರು ತಡೆಯಾಜ್ಞೆ ಅಷ್ಟೇ ಕೋರಿದ್ದರು. ಈಗಿರುವ ಸ್ವರೂಪದಲ್ಲಿ ಜಮೀನು ವಶಕ್ಕೆ ನೀಡಬೇಕು ಎಂದು ಮೋಹನ್‌ಲಾಲ್ ಕೇಳಿರಲಿಲ್ಲ. ಈ ಪ್ರಕರಣ ಸಾಬೀತುಪಡಿಸಲು ಅರ್ಜಿದಾರರು ವಿಫಲವಾಗಿರುವ ಕಾರಣ ಪ್ರಕರಣ ವಜಾಗೊಳಿಸುವುದಾಗಿ ನ್ಯಾಯಾಲಯ ಹೇಳಿದೆ.

ಈ ಬಗ್ಗೆ ಮಾತನಾಡಿರುವ ಎದುರುದಾರರ ವಕೀಲ ಅಮಿತ್ ಕುಮಾರ್, 1959ರಲ್ಲಿ ಮೂಲ ಮೊಕದ್ದಮೆ ಹೂಡಲಾಗಿತ್ತು. ನ್ಯಾಯಾಧೀಶರು ಈ ಪ್ರಕರಣ ಇತ್ಯರ್ಥಪಡಿಸಿರುವುದಕ್ಕೆ ಧನ್ಯವಾದ ಸಲ್ಲಿಸಬೇಕು ಎಂದಿದ್ದಾರೆ.

ಮೂರು ಪೀಳಿಗೆಗಳಿಂದ ಈ ಪ್ರಕರಣ ನಡೆದು ಬರುತ್ತಿದೆ. ಆದರೆ ಇಲ್ಲಿಯೇ ಪ್ರಕರಣ ಅಂತ್ಯವಾಯಿತು ಎಂದು ಹೇಳುವ ಹಾಗಿಲ್ಲ. ಉನ್ನತ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದು ವಕೀಲರು ತಿಳಿಸಿದ್ದಾರೆ.

# ತುಂಬಿದ ಕುಟುಂಬವೇ ರಾಮನ ಅವತಾರದ ಸಂದೇಶ

## ಶ್ರೀ ರಾಮಾಂಜನೇಯ ದೇವಸ್ಥಾನದ ಕಳಸಾರೋಹಣ ಕಾರ್ಯಕ್ರಮದಲ್ಲಿ ಶ್ರೀ ವರಸದ್ಯೋಜಾತ ಸ್ವಾಮೀಜಿ

ಹರಪನಹಳ್ಳಿ,ಫೆ.8- ಶ್ರೀರಾಮಚಂದ್ರನ ಆದರ್ಶ ಗುಣಗಳು ಹಾಗೂ ಧಾರ್ಮಿಕ ಜೀವನ ವೈಶಿಷ್ಟ್ಯಗಳನ್ನು ಒಮ್ಮೆ ನೋಡಿದರೆ, ಅವನ ವ್ಯಕ್ತಿತ್ವ ನಮ್ಮೆಲ್ಲರಿಗೂ ಮಾರ್ಗದರ್ಶನವಾಗಿ ಪರಿಣಮಿ ಸುತ್ತದೆ ಎಂದು ತೆಗ್ಗಿನಮಠ ಸಂಸ್ಥಾನದ ಪೀಠಾಧ್ಯಕ್ಷ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹೇಳಿದರು.



ಹರಪನಹಳ್ಳಿ

ಪಟ್ಟಣದ ತೆಲುಗರ ಬೀದಿಯಲ್ಲಿ ಶ್ರೀ ರಾಮಾಂಜನೇಯ ಟ್ರಸ್ಟ್ ಹಾಗೂ ತಾಲ್ಲೂಕು ಸವಿತಾ ಸಮಾಜದ ವತಿಯಿಂದ ಆಯೋಜಿಸಿದ್ದ ಶ್ರೀ ರಾಮಾಂಜನೇಯ ದೇವಸ್ಥಾನದ ಕಳಸಾ ರೋಹಣ ಮತ್ತು ಗರುಡ ಸ್ಥಂಭ ಪ್ರತಿಷ್ಠಾಪನೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ರಾಮನು ರಾಜ ಮಾತ್ರವಲ್ಲ, ಅವನು ನಂಬಿಕೆ, ಸತ್ಯ, ತ್ಯಾಗ ಮತ್ತು ಪ್ರೇಮದ ಪ್ರತಿರೂಪ. ರಾಮನೊಬ್ಬನೇ ಎಲ್ಲಿಯೂ ಪೂಜಿತನಾಗುವುದಿಲ್ಲ. ಜೊತೆಗೆ ಸೀತೆ, ಲಕ್ಷ್ಮಣ, ಹನುಮಂತ ಇದ್ದೇ ಇರುತ್ತಾರೆ. ತುಂಬಿದ ಕುಟುಂಬವೇ ರಾಮಾವತಾರದ ಸಂದೇಶ. ಅದು ಒಂದು ಸಂಸಾರಕ್ಕೆ ಸೀಮಿತವಾದ ಕಲ್ಪನೆಯಲ್ಲ, ಮನುಕುಲವೇ ಒಂದು ಎಂಬ ಉನ್ನತ ನೆಲೆಯದು. ಅಲ್ಲಿ ಚಿಕ್ಕ ಅಳಿಲಿಗೂ ಮಹತ್ತರ ಸ್ಥಾನವಿದೆ.

ಪ್ರಾಮಾಣಿಕತೆ, ಸಹನೆಯಂತ ಗುಣಗಳು ಮಾನವ ಜಗತ್ತಿಗೆ ಶಾಶ್ವತ ಮಾದರಿಯಾಗಿವೆ. ತನ್ನ ಮಾತಿಗೆ ಮತ್ತು ಶಪಥಕ್ಕೆ ಸದಾ ನಿಷ್ಠನಾಗಿದ್ದ ರಾಮನ ಆದರ್ಶ, ನಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳಲು ಯೋಗ್ಯ.

ಇಂದು, ಶ್ರೀರಾಮನ ಆದರ್ಶಗಳನ್ನು ಪಾಲಿಸುವ ಮೂಲಕ ನಾವು ಶಾಂತಿ, ಸೌಹಾರ್ದತೆ, ಮತ್ತು ಸಜ್ಜನಿಕೆಯುಕ್ತ ಸಮಾಜವನ್ನು ನಿರ್ಮಿಸಬಹುದು. ನಮ್ಮ ನೈತಿಕತೆ, ಪ್ರೀತಿಯ ಮತ್ತು ಭಕ್ತಿಯ ಬೆಳವಣಿಗೆಯಲ್ಲಿ ರಾಮನ ತತ್ವಗಳು ಪ್ರೇರಣೆಯಾಗಲಿ ಎಂದರು.

ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಮಾತನಾಡಿ, ರಾಮನು ತನ್ನ ಜೀವನದಲ್ಲಿ ಹಕ್ಕುಗಳು ಮತ್ತು ಕರ್ತವ್ಯಗಳ ನಡುವಿನ ಸಮತೋಲನವನ್ನು ಕಾಪಾಡಿದ ಮಹಾ ವ್ಯಕ್ತಿ. ತಂದೆಯ ಆದೇಶಕ್ಕೆ ಗೌರವ ನೀಡಿ, ತನ್ನ ರಾಜನ ಸ್ಥಾನವನ್ನು ತ್ಯಜಿಸಿ, ಅರಣ್ಯಕ್ಕೆ ತೆರಳಿದ ಮಹಾನ್ ಧೀರ. ಪತ್ನಿ ಸೀತೆಯನ್ನೂ ಸಹೃದಯತೆಯಿಂದ ರಕ್ಷಿಸಿದ. ಅದೇ ರೀತಿ, ವಾನರ ಸೇನೆಯೊಡಗೂಡಿ ರಾಮರಾಜ್ಯದ ಸ್ಥಾಪನೆಗಾಗಿ ಹೋರಾಡಿದ ಸಮರ್ಥ ನಾಯಕ ಎಂದರು.

ವೇಳೆ ಪುರಸಭೆ ಅಧ್ಯಕ್ಷರಾದ ಎಂ. ಫಾತೀಮಾಭಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ವೆಂಕಟೇಶ, ಸದಸ್ಯ ಮಂಜುನಾಥ ಇಜಂತಕರ್, ಪಿ ಎಲ್.ಡಿ ಬ್ಯಾಂಕ್ ಉಪಾಧ್ಯಕ್ಷ ಗೊಂಗಡಿ ನಾಗರಾಜ, ಬಸಪ್ಪ ದಾನಿ, ದಾನ ಚಿಂತಾಮಣಿ ಲಲಿತಮ್ಮ ಮತ್ತು ಇತರರು ಉಪಸ್ಥಿತರಿದ್ದರು.

## ತರಳಬಾಳು ಹುಣ್ಣಿಮೆ : ಇಂದು ಜಗದ್ಗುರುಗಳಿಂದ ಪಿಟೀಲು ವಾದನ



ಭರಮಸಾಗರದಲ್ಲಿ ಜರುಗುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10 ಗಂಟೆಗೆ ಪ್ರಧಾನ ವೇದಿಕೆಯಲ್ಲಿ ಪ್ರತಿಭಾನ್ವೇಷಣೆಯನ್ನು ಏರ್ಪಡಿಸಲಾಗಿದೆ. ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಪಿಟೀಲು ವಾದನವನ್ನು ನುಡಿಸುವುದರ ಮೂಲಕ ಸ್ಪರ್ಧೆಗೆ ಚಾಲನೆ ನೀಡಲಿದ್ದಾರೆ. ಪ್ರಸಿದ್ಧ ಗಾಯಕ ಶಶಿಧರ ಕೋಟೆ, ಕೀಬೋರ್ಡನ್ನು ವಿದ್ವಾನ್ ಶಿವಾನಂದ ಜೋಯಿಸ್, ಮೆಂಡೋಲಿನ್ ವಾದನವನ್ನು ವಿದ್ವಾನ್ ಎಲ್ ಎಸ್ ಕಾರ್ತಿಕ್ ಮತ್ತು ಮೃದಂಗ ವಾದ್ಯವನ್ನು ವಿದ್ವಾನ್ ಶ್ರೀವತ್ಸ ನುಡಿಸಲಿದ್ದಾರೆ.

## ಸದ್ಧರ್ಮ ನ್ಯಾಯಪೀಠದ ಕಲಾಪ ಇಲ್ಲ

ಸಿರಿಗೆರೆ, ಫೆ. 8- ತರಳಬಾಳ ಬಾಳು ಹುಣ್ಣಿಮೆ ಮಹೋತ್ಸವ ಪ್ರಯುಕ್ತ ಇದೇ ದಿನಾಂಕ 10 ಮತ್ತು 17 ಈ ಮೂರು ಸೋಮವಾರಗಳಂದು ಸದ್ಧರ್ಮ ನ್ಯಾಯಪೀಠದ ಕಾರ್ಯಕಲಾಪಗಳು ನಡೆಯುವುದಿಲ್ಲ ಎಂದು ಪೀಠದ ಕಾರ್ಯದರ್ಶಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 08194-268829, 268848.

## ಮಾರ್ಚ್ 24 ರಿಂದ ಎರಡು ದಿನ ಬ್ಯಾಂಕ್ ನೌಕರರ ಮುಷ್ಕರ

ನವದೆಹಲಿ, ಫೆ. 7 - ಹಲವಾರು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಬ್ಯಾಂಕ್ ನೌಕರರ ಒಕ್ಕೂಟಗಳು ಮಾರ್ಚ್ 24 ರಿಂದ ಎರಡು ದಿನಗಳ ಮುಷ್ಕರಕ್ಕೆ ಕರೆ ನೀಡಿವೆ. 9 ಬ್ಯಾಂಕ್ ಉದ್ಯೋಗಿಗಳ ಒಕ್ಕೂಟಗಳ ವೇದಿಕೆಯಾದ ಯು.ಎಫ್.ಬಿ.ಯು. ಮುಷ್ಕರಕ್ಕೆ ಕರೆ ನೀಡಿದೆ. ಬ್ಯಾಂಕುಗಳಲ್ಲಿ ಖಾಲಿ ಇರುವ ಹಲವಾರು ಹುದ್ದೆಗಳನ್ನು ಭರ್ತಿ ಮಾಡಬೇಕು ಹಾಗೂ ವಾರದ ಕೆಲಸದ ದಿನಗಳು ಐದಕ್ಕೆ ಸೀಮಿತ ಮಾಡಬೇಕು ಎಂಬುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟು ಮುಷ್ಕರಕ್ಕೆ ಕರೆ ನೀಡಲಾಗಿದೆ.

## ಬಿ.ಎಸ್.ಚನ್ನಬಸಪ್ಪ ಕಾಲೇಜಿಗೆ ರ‍್ಯಾಂಕ್





ದಾವಣಗೆರೆ, ಫೆ. 8 - 2023 -24 ನೇ ಸಾಲಿನ ದಾವಣಗೆರೆ ವಿಶ್ವ ವಿದ್ಯಾನಿಲಯದಿಂದ ನಡೆದ ಪರೀಕ್ಷೆಯಲ್ಲಿ ನಗರದ ಬಿ. ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ ಬಿ.ಬಿ.ಎ. ನಲ್ಲಿ ಕು. ವರ್ಷಿತ ಡಿ.ಎಚ್., 4ನೇ ರ‍್ಯಾಂಕ್ ಹಾಗೂ ಬಿ.ಕಾಂನಲ್ಲಿ ಕು. ಅಂಬಿಕಾ ಎಸ್.ಎ. 9ನೇ ರ‍್ಯಾಂಕ್ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಇವರಿಗೆ ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್, ಕಾಲೇಜಿನ ಪ್ರಾಂಶುಪಾಲ ಎಂ.ಸಿ. ಗುರು ಅಭಿನಂದಿಸಿದ್ದಾರೆ.

## ನಗರಕ್ಕೆ ಇಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಭೇಟಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಡಾ.ಪುರುಷೋತ್ತಮ ಬಿಳಿಮಲೆ ಅವರು ಇಂದು ಬೆಳಿಗ್ಗೆ 11 ಗಂಟೆಗೆ ನಗರಕ್ಕೆ ಆಗಮಿಸಿ, ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

## ಇಂದು ಸಮಗ್ರ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳ ಪದಗ್ರಹಣ

ದಾವಣಗೆರೆ, ಫೆ. 8- ಸಮಗ್ರ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನಾಳೆ ದಿನಾಂಕ 9 ರಂದು ಭಾನುವಾರ ಬೆಳಿಗ್ಗೆ 10 ಕ್ಕೆ ನಗರದ ರೋಟರಿ ಬಾಲಭವನದಲ್ಲಿ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ಹಾಗೂ ಗುರುತಿನ ಚೀಟಿ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಮಾಲಾ ನಾಗರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಅವಿನಾಶ್, ವೈದ್ಯರಾದ ಡಾ. ವೀಣಾ, ಡಾ. ಗಾಯತ್ರಿ, ಹೈಕೋರ್ಟ್ ವಕೀಲ ಆದಿತ್ಯ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಪದಾಧಿಕಾರಿಗಳಾದ ನಲ್ಲೂರು ವೇಣುಗೋಪಾಲ್, ವೀರಣ್ಣ, ಭೋಜರಾಜು, ಅಕ್ಬರ್ ಬಾಷ, ಫಯಾಜ್ ಅಹಮದ್, ಆನಂದ ಪೂಜಾರ್, ರಾಜು ಆನೆಕೊಂಡ ಉಪಸ್ಥಿತರಿದ್ದರು.

## ನಗರದಲ್ಲಿಂದು ಮುಕ್ತ ಚೆಸ್ ಪಂದ್ಯ

ಜಿಲ್ಲಾ ಚೆಸ್ ಅಸೋಸಿಯೇಷನ್ ಹಾಗೂ ಲಯನ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ಲಯನ್ಸ್ ಭವನದಲ್ಲಿ ರಾಜ್ಯಮಟ್ಟದ ಮುಕ್ತ ಚದುರಂಗ (ಚೆಸ್) ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ ಎಂದು ಅಸೋಸಿಯೇಷನ್ ಕಾರ್ಯದರ್ಶಿ ಕೆ.ಎಸ್. ಸತೀಶ್ಚಂದ್ರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮುಖ್ಯ ಅತಿಥಿಯಾಗಿ ಡಾ. ಕೆ.ವಿ. ಶ್ರೀಪಾದ ಆಗಮಿಸಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ, ಡಿಡಿಪಿಐ ಜಿ. ಕೊಟ್ರೇಶ್ ಮತ್ತಿತರರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಅಸೋಸಿಯೇಷನ್ ಹಾಗೂ ಲಯನ್ಸ್ ಕ್ಲಬ್ ಪದಾಧಿಕಾರಿಗಳಾದ ಎ.ಎಂ.ಹೆಗಡೆ, ಎಸ್.ಜಿ.ಉಳುವಯ್ಯ, ಶ್ರೀಪಾದ ಹೆಗಡೆ, ಚಂದ್ರಪ್ಪ ಉಪಸ್ಥಿತರಿದ್ದರು.

# ಮದ್ಯ ನೀತಿ ಹಾಗೂ ಹಣಕ್ಕೆ ಆದ್ಯತೆ ನೀಡಿದ್ದಕ್ಕೆ ಎಎಪಿ ಸೋಲು : ಅಣ್ಣಾ ಹಜಾರೆ



ಮುಂಬೈ, ಫೆ. 8 - ಮದ್ಯ ನೀತಿ ಹಾಗೂ ಹಣಕ್ಕೆ ಆದ್ಯತೆ ನೀಡಿದ ಕಾರಣದಿಂದ ಆಮ್ ಆದ್ಮಿ ಪಾರ್ಟಿ ಸೋಲು ಕಂಡಿದೆ ಎಂದು ಒಂದು ಕಾಲದಲ್ಲಿ ಅರವಿಂದ ಕೇಜ್ರಿವಾಲ್ ಅವರ ಗುರು ಆಗಿದ್ದ ಕಾರ್ಯಕರ್ತ ಅಣ್ಣಾ ಹಜಾರೆ ಹೇಳಿದ್ದಾರೆ. ಅಭ್ಯರ್ಥಿಯಾಗುವವರ ಚರಿತ್ರೆ ಶುದ್ಧವಾಗಿರಬೇಕು ಹಾಗೂ ತ್ಯಾಗದ ಗುಣ ಅರಿತಿರಬೇಕು ಎಂದು ಹಜಾರೆ ಹೇಳಿದ್ದಾರೆ.

ಭ್ರಷ್ಟಾಚಾರ ವಿರೋಧಿ ಹೋರಾಟಗಾರ ಅಣ್ಣಾ ಹಜಾರೆ ಅವರು ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ಎಎಪಿ ಹುಟ್ಟಿಕೊಂಡಿತ್ತು. ದೆಹಲಿ ವಿಧಾನಸಭಾ ಚುನಾವಣೆ ಯಲ್ಲಿ ಬಿಜೆಪಿ ವಿರುದ್ಧ ಎಎಪಿ ತೀವ್ರ ಮುಖಭಂಗ ಕಂಡಿದೆ.


ದೆಹಲಿ ಸರ್ಕಾರದ ಮದ್ಯದ ನೀತಿಯೊಂದಿಗೆ ಹಣ ಬಂತು ಹಾಗೂ ಆ ಹಣದಲ್ಲಿ ಪಕ್ಷ ಕೊಚ್ಚಿ ಹೋಗಿದೆ. ಆಮ್ ಆದ್ಮಿ ಪಾರ್ಟಿಯ ವರ್ಚಸ್ಸಿಗೆ ಧಕ್ಕೆಯಾಗಿದೆ ಎಂದು ಹಜಾರೆ ಹೇಳಿದರು.

ಪಕ್ಷದ ನಾಯಕ ಅರವಿಂದ ಕೇಜ್ರಿವಾಲ್ ಅವರು ಶುದ್ಧ ಚಾರಿತ್ರದ ಬಗ್ಗೆ ಮಾತನಾಡುತ್ತಿದ್ದರು. ಅವರು ಈಗ ಮದ್ಯದ ಕುರಿತು ಮಾತನಾಡಲು ಆರಂಭಿಸಿದ್ದಾರೆ ಎಂಬುದನ್ನು ಜನ ಗಮನಿಸಿದ್ದಾರೆ ಎಂದು ಹಜಾರೆ ಹೇಳಿದರು.

ನಿಸ್ವಾರ್ಥದಿಂದ ಜನರ ಸೇವೆ ಮಾಡಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳಲು ಆಮ್ ಆದ್ಮಿ ಪಾರ್ಟಿ ವಿಫಲವಾಯಿತು ಹಾಗೂ ತಪ್ಪು ದಾರಿ ಹಿಡಿಯಿತು. ಹಣಕ್ಕೆ ಮೊದಲ ಆದ್ಯತೆ ನೀಡಿದ್ದು ಪಕ್ಷದ ವರ್ಚಸ್ಸಿಗೆ ಧಕ್ಕೆ ತಂದು ಸೋಲಿಗೆ ಕಾರಣವಾಯಿತು ಎಂದವರು ಹೇಳಿದರು.

2012ರಲ್ಲಿ ಕೇಜ್ರಿವಾಲ್ ಅವರು ಆಮ್ ಆದ್ಮಿ ಪಾರ್ಟಿ ರಚಿಸಿದಾಗ ಹಜಾರೆಯಿಂದ ದೂರವಾಗಿದ್ದರು.

# ಬಿಜೆಪಿ ನಿಯಂತ್ರಿಸುವಲ್ಲಿ ಇಂಡಿಯಾ ಕೂಟ ವಿಫಲ : ಸಿದ್ದೇಶ್ವರ, ಗಾಯತ್ರಿ ಸಿದ್ದೇಶ್ವರ





ದಾವಣಗೆರೆ, ಫೆ. 8 - ದೆಹಲಿ ವಿಧಾನಸಭಾ ಚುನಾವಣೆ ಫಲಿತಾಂಶ ಹೊರಬಂದಿದ್ದು, 27 ವರ್ಷಗಳ ಬಳಿಕ ರಾಷ್ಟ್ರ ರಾಜಧಾನಿಯಲ್ಲಿ ಬಿಜೆಪಿ ಗೆಲುವು ದಾ ಖ ಲಿ ಸಿ ರು ವು ದು ಸಂತೋಷವಾಗಿದೆ. ಈ ಗೆಲುವು ರಾಷ್ಟ್ರಕ್ಕೆ ಒಂದು ಸಂದೇಶವನ್ನು ನೀಡಿದಂತಾಗಿದೆ. ನರೇಂದ್ರ ಮೋದಿ ಅವರ ಜನಪ್ರಿಯತೆ, ಆಡಳಿತದ ಕಾರ್ಯವೈಖರಿ, ಜನಪರ ಬಜೆಟ್ ಮಂಡನೆ ಹಾಗೂ ಹಿಂದಿನ ಸರ್ಕಾರದ ಭ್ರಷ್ಟಾಚಾರಗಳು ಇವೆಲ್ಲವೂ ದೆಹಲಿಯ ಮತದಾರರ ಮನಸ್ಸು ಗೆಲ್ಲಲ್ಲು ಸಹಕಾರಿಯಾಗಿವೆ ಎಂದು ಮಾಜಿ ಕೇಂದ್ರ ಸಚಿವ ಜಿ. ಎಂ. ಸಿದ್ದೇಶ್ವರ ಹಾಗೂ ಬಿಜೆಪಿ ಮುಖಂಡರಾದ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರುಗಳು ತಿಳಿಸಿದ್ದಾರೆ.

ದೆಹಲಿಯಲ್ಲಿನ ಹಿಂದಿನ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷಗಳು ಉಚಿತ ಗ್ಯಾರಂಟಿಗಳನ್ನು ಘೋಷಿಸಿದ್ದರೂ ಸಹ ದೆಹಲಿಯ ಮತದಾರರು ಯಾವುದೇ ಆಮಿಷಕ್ಕೆ ಒಳಗಾಗದೇ ಬಿಜೆಪಿಗೆ ಅಧಿಕಾರವನ್ನು ನೀಡಿರುವುದು ಸ್ವಾಗತಾರ್ಹ ಎಂದು ಅವರು ಹೇಳಿದ್ದಾರೆ.

## ರಾಣೇಬೆನ್ನೂರಿಗೆ ಇಂದು ಕೇಂದ್ರ ಸಚಿವ ಹೆಚ್. ಡಿ. ಕುಮಾರಸ್ವಾಮಿ

ನಗರದ ಪಿ.ಬಿ. ರಸ್ತೆಯ ಸಾಲೇಶ್ವರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿರುವ ಸನ್ಮಾನ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ಅವರು ಭಾಗವಹಿಸಲಿದ್ದಾರೆ ಎಂದು ಹಾವೇರಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಮಂಜುನಾಥ ಎಸ್. ಗೌಡಶಿವಣ್ಣನವರ ತಿಳಿಸಿದ್ದಾರೆ.

## ಹೊನ್ನಾಳಿಯಲ್ಲಿ ಇಂದು ಪಾಂಡುರಂಗ ರಥೋತ್ಸವ



ವಿಠ್ಠಲರುಕುಮಾಯಿ ದಿಂಡಿ ಉತ್ಸವವು ಇಂದು ಬೆಳಿಗ್ಗೆ 8 ಗಂಟೆಗೆ ನಡೆಯಲಿದೆ. ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರಾದ ಸುರೇಶಗವಾಯಿ ಮತ್ತು ತಂಡದಿಂದ ಸಂತವಾಣಿ ನಡೆಯಲಿದೆ ಎಂದು ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಶ್ರೀಹರಿಹೊವಳೆ ತಿಳಿಸಿರುವರು.

## ದೆಹಲಿಯಲ್ಲಿ ಬಿಜೆಪಿ ಗೆಲುವು : ನಗರದಲ್ಲಿ ವಿಜಯೋತ್ಸವ



ದಾವಣಗೆರೆ, ಫೆ. 8 - ದೆಹಲಿ ವಿಧಾನಸಭಾ ಕ್ಷೇತ್ರದಲ್ಲಿ ಅಭೂತಪೂರ್ವ ಜಯಗಳಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾ ಬಿಜೆಪಿ ಘಟಕದಿಂದ ನಗರದ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ವಿಜಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜಶೇಖರ್ ನಾಗಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೇಬಾಳು, ಮಾಜಿ ಸಚೇತಕ ಡಾ. ಎ. ಹೆಚ್ ಶಿವಯೋಗಿ ಸ್ವಾಮಿ, ಕೆ.ಎಂ. ಸುರೇಶ್, ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಆರ್. ಶಿವಪ್ರಕಾಶ್, ಪಾಲಿಕೆ ಸದಸ್ಯ ಶಿವಾನಂದ, ಉತ್ತರ ಮಂಡಲದ ಅಧ್ಯಕ್ಷ ತಾರೇಶ್ ನಾಯಕ್, ಮುಖಂಡರಾದ ರಮೇಶ್ ನಾಯಕ್, ಸಂತೋಷ್ ಪೈಲ್ವಾನ್, ಕಿಶೋರ್, ಕೊಟ್ರೇಶ್ ಗೌಡ, ಕೆ.ವಿ ಗುರು, ಬೆಳ್ಳೂಡಿ ಮಂಜುನಾಥ್, ಕರಿಯಪ್ಪ, ಗುರುರಾಜ್ ಎನ್.ಎ., ಅಜ್ಜಂಪುರ ವರುಣ್, ರಾಜು, ಮಂಜಣ್ಣ ಹಾಗೂ ಇತರರು ಉಪಸ್ಥಿತಿಯಲ್ಲಿದ್ದರು.

## ದೆಹಲಿ ಗೆಲುವು : ಜಗಳೂರಿನಲ್ಲಿ ಬಿಜೆಪಿ ವಿಜಯೋತ್ಸವ



ಜಗಳೂರು, ಪೆ. 8- ದೆಹಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಪಕ್ಷವು ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ತಾಲ್ಲೂಕಿನ ಬಿಜೆಪಿ ಕಾರ್ಯಕರ್ತರು, ಮುಖಂಡರು ಇಲ್ಲಿನ ಮಹಾತ್ಮ ಗಾಂಧಿ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಎಚ್. ಪಿ ರಾಜೇಶ್, ಪ್ರಧಾನಿ ನರೇಂದ್ರ ಮೋದಿ ಅವರ ಉತ್ತಮ ಆಡಳಿತಕ್ಕೆ ದೆಹಲಿಯ ಜನತೆ ಬಿಜೆಪಿಗೆ ಅಧಿಕಾರ ನೀಡಿದ್ದಾರೆ. ಆಮ್ ಆದ್ಮಿ ಪಕ್ಷದ ಭ್ರಷ್ಟಾಚಾರದಿಂದ ಬೇಸತ್ತು ಹೋಗಿದ್ದ ದೆಹಲಿ ಜನತೆ ಬಿಜೆಪಿ ಪಕ್ಷಕ್ಕೆ ಪೂರ್ಣ ಅಧಿಕಾರ ನೀಡಿದೆ ಎಂದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಅಧ್ಯಕ್ಷ ನವೀನ್ ಕುಮಾರ್, ಮಾಜಿ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಬಿಜೆಪಿ ಮುಖಂಡರಾದ ಡಿ.ವಿ ನಾಗಪ್ಪ, ಜೆ.ವಿ. ನಾಗರಾಜ್, ಬಿಸ್ತುವಳ್ಳಿ ಬಾಬು, ಕೆ. ಟಿ. ಬಡಯ್ಯ, ಪೂಜಾರ್ ಹನುಮಂತಪ್ಪ, ವಕೀಲರಾದ ಹನುಮಂತಪ್ಪ, ಮರೇನಹಳ್ಳಿ, ಶೇಖರಪ್ಪ, ದಾಸಪ್ಪ ನಾಯಕ, ಶಿವಮೂರ್ತಿ, ಓಬಳೇಶ್, ಹುಲಿಕುಂಟಶೆಟ್ಟಿ, ಕ್ಯಾಂಪ್ ರಾಜಣ್ಣ ಮುಂತಾದವರು ಇದ್ದರು.

## ಚಳ್ಳಕೆರೆ ತಾ.ನಲ್ಲಿ ಶ್ರೀ ಗುರು ಚೆಲುಮೆರುದ್ರಸ್ವಾಮಿ ತೇರು

ಚಳ್ಳಕೆರೆ ತಾಲ್ಲೂಕಿನ ನಾಗಗೊಂಡನಹಳ್ಳಿಯ ಗುರು ಚೆಲುಮೆರುದ್ರಸ್ವಾಮಿ ರಥೋತ್ಸವದ ಅಂಗವಾಗಿ ಚಿತ್ರದುರ್ಗ ಜಿಲ್ಲಾ ಕುಸ್ತಿ ಸಂಘದ ಸಹಭಾಗಿತ್ವದಲ್ಲಿ ಇಂದು ಮಧ್ಯಾಹ್ನ 3ಕ್ಕೆ ಪುರುಷ ಹಾಗೂ ಮಹಿಳೆಯರ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ ನಡೆಯಲಿವೆ. ನಾಳೆ ಸೋಮವಾರ ಸಮಾರೋಪ ಸಮಾರಂಭ ನಡೆಯಲಿದೆ. ಹೂವಿನ ಅಡ್ಡಪಲ್ಲಕ್ಕಿ ಉತ್ಸವ ಜಾಜೂರು ಗ್ರಾಮದಲ್ಲಿ ನಡೆದು ಸಂಪನ್ನಗೊಳ್ಳಲಿದೆ.
















KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas